ಜುಲೈ 2000

ಅಚಲ

ತಿಂಗಳ ಪತ್ರಿಕೆ

ಒಳಗೇನಿದೆ ?

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 15 ಸಂಚಿಕೆ - 7

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 14 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)

ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಮತ್ತೊಂದು ಸಾಹಿತ್ಯ ಮೇಳ, ಮೆರವಣಿಗೆ...

ಸಾಹಿತ್ಯ ಸಮ್ಮೇಳನಗಳು ತಮ್ಮ ಸರಳತೆ, ಗಾಂಭೀರ್ಯ ಕಳೆದುಕೊಂಡು ಬರಿಯ ಮೇಳ, ಮೆರವಣಿಗೆಗಳಾಗುವುದು ಗೊತ್ತಿರುವ ವಿಚಾರ.ಆದರೆ ಇತ್ತೀಚೆಗೆ ನಡೆದ 68ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇಪ್ಪತ್ತೈದು ವರ್ಷಗಳ ನಂತರ ಓರ್ವ ಮಹಿಳೆಯನ್ನು ಅಧ್ಯಕ್ಷತೆ ಮಾಡಿರುವ ಸಂದರ್ಭದಲ್ಲಿಯೂ ಮಹಿಳೆಯ ವ್ಯಕ್ತಿತ್ವ ಮತ್ತು ಸಾಧನೆಗೆ ಕಿಂಚಿತ್ತೂ ಬೆಲೆ ಇಲ್ಲದೆ, ಮಹಿಳೆಯನ್ನು ಆಕೆಯ ವೈವಾಹಿಕ ಸ್ಥಾನಮಾನದ ಮೇಲೆ ಗುರುತಿಸುವುದು, ಸುಮಂಗಲೆ ಅಮಂಗಲೆಯರೆಂಬ ಭಾವ ಬರುವಂತಹ ಆಚರಣೆಗಳಲ್ಲಿ ತೊಡಗುವುದು ಆಘಾತ ತರಿಸಿವೆ. ಪತ್ರಿಕೆಗಳ ವರದಿಯ ಪ್ರಕಾರ, ' ಆನೆಯ ಮುಂದೆ 68 ಪೂರ್ಣ ಕುಂಭ ಹೊತ್ತ ಸುಮಂಗಲೆಯರು ಸಾಗಿದರು. ಸಮ್ಮೇಳನದಲ್ಲಿ ಪಾಲ್ಗೊಂಡ ಮಹಿಳಾ ಸಾಹಿತಿಗಳಿಗೆ ಅರಿಶಿನ, ಕುಂಕುಮ, ಹಸಿರು ಬಳೆ ನೀಡಿ ಸ್ವಾಗತಿಸಲಾಯಿತು'. ಇದರ ಅರ್ಥವಾದರೂ ಏನು ? 'ಸುಮಂಗಲಿಯರು ಶ್ರೇಷ್ಠ' ಎಂಬ ಅಪರೋಕ್ಷ ಸೂಚನೆಯಲ್ಲವೆ? ಇಂತಹ ಜನ ಮುಂದೆ 'ಸುಮಂಗಲಿ'ಯೇ ಅಧ್ಯಕ್ಷರಾಗಬೇಕು ಎಂದು ತೀರ್ಮಾನಿಸಿದರೂ ಅಚ್ಚರಿ ಇಲ್ಲ.

'ಮೆರವಣಿಗೆಯಲ್ಲಿ ಭಾಗವಹಿಸದಿದ್ದರೆ ಶಾಂತಾದೇವಿ ಅವರು ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆ ನೀಡಲಿ' ಎಂಬ ಹೇಳಿಕೆಯಂತೂ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೇ ಮಾಡಿರುವ ಅಪಮಾನ. ಇಲ್ಲಿ ಸಾಹಿತ್ಯವಾಗಲಿ, ಸಮ್ಮೇಳನವಾಗಲಿ ಮುಖ್ಯವಿದ್ದಂತಿಲ್ಲ. ಜನ, ಜಾತ್ರೆ, ಮೆರವಣಿಗೆಯಷ್ಟೆ ಮುಖ್ಯ ಉದ್ದೇಶವಾಗಿದೆ. ಸಾಹಿತ್ಯ ಸಮ್ಮೇಳನವು ಎಲ್ಲ ಜಾತಿ, ಧರ್ಮಕ್ಕೆ ಸೇರಿದ್ದು.. ಇಲ್ಲಿ ಬರುವ ಹೆಣ್ಣು ಮಕ್ಕಳಿಗೆ ಅರಿಶಿನ,ಕುಂಕುಮ, ಹಸಿರುಬಳೆ ನೀಡುತ್ತಾ ಅವರ ಮುತ್ತೈದೆತನವನ್ನು ವೈಭವೀಕರಿಸುವುದಷ್ಟೇ ಅಲ್ಲ, ಈ ಸಮ್ಮೇಳನ ಒಂದು ಧರ್ಮೀಯರಿಗೆ ಸೇರಿದ್ದೆಂಬ ಭಾವ ತರಿಸಿದ್ದಾರೆ.

ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ನೋಡಿದಾಗ, ಆರಿಸಿಕೊಂಡಿರುವ ವಿಷಯಗಳಲ್ಲಾಗಲಿ, ಭಾಷಣಕಾರರಾಗಿ ಭಾಗವಹಿಸುವಿಕೆಯಲ್ಲಾಗಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕಾಣಲಿಲ್ಲ, ಅಧ್ಯಕ್ಷ ಸ್ಥಾನವೊಂದನ್ನು ಹೊರತು ಪಡಿಸಿ. ಮಹಿಳೆಯ ಪಾತ್ರ ಕೊನೆಗೆ ಅರಿಶಿನ ಕುಂಕುಮ ಕಾಣಿಕೆ ಪಡೆದು, ಪೂರ್ಣಕುಂಭ ಹೊರುವುದಕ್ಕಷ್ಟೇ ಸೀಮಿತವಾದಂತಿದೆ.

ಪುಸ್ತಕದ ಮಳಿಗೆಗಳಲ್ಲಿ ರುದ್ರಾಕ್ಷಿ, ಮಣಿಸರ, ವಿಭೂತಿ, ಜನಿವಾರ, ಲಿಂಗದಾರ, ಉಡುದಾರ, ಮಾತ್ರವಲ್ಲ ಬನಿಯನ್, ಲುಂಗಿ, ಟವಲ್, ಚೂಡಿದಾರ್ ಕೂಡಾ ಮಾರಾಟಕ್ಕಿಟ್ಟು, ಅಂತೂ ಸಾಹಿತ್ಯ ಸಮ್ಮೇಳನ ಒಂದು ದೊಡ್ಡ ಜಾತ್ರೆಯಂತೆಯೇ ನಡೆದಿದೆ. ಇಷ್ಟೆಲ್ಲ ಅಡೆತಡೆಗಳ ಮಧ್ಯೆ, ಗಲಾಟೆ ಗದ್ದಲದ ನಡುವೆಯೂ ತಮ್ಮ ಅಧ್ಯಕ್ಷ ಸ್ಥಾನದ ಗಾಂಭೀರ್ಯ ಮರ್ಯಾದೆ ಉಳಿಸಿದವರು ಶಾಂತದೇವಿ ಮಾಳವಾಡ. 'ನಾನು ಸ್ತ್ರೀ ಪರವಾದ ಎಲ್ಲ ವಿಚಾರ, ಸಿದ್ಧಾಂತ, ತತ್ವಗಳನ್ನು ಬೆಂಬಲಿಸುತ್ತೇನೆ. ಮಹಿಳೆಯರ ಮೇಲೆ ಯಾವುದೇ ರೀತಿಯ ಶೋಷಣೆ,. ಅನ್ಯಾಯ ಆಗಬಾರದು' ಎಂದು ಹೇಳಿದ ಶಾಂತದೇವಿ ಮಾಳವಾಡ ಅವರು 'ಕತೆ ಕಾದಂಬರಿಗಳಿಗೆ ಸೀಮಿತವಾಗಿದ್ದ ಮಹಿಳಾ ಸಾಹಿತ್ಯವು ಇಂದು ಕಾವ್ಯ,ನಾಟಕ, ವಿಮರ್ಶೆ, ಸಂಶೋಧನೆ, ಪ್ರಬಂಧ, ಪ್ರವಾಸ, ಅನುವಾದ ಹೀಗೆ ಹಲವು ಪ್ರಕಾರಗಳಲ್ಲಿ ಸಾವಿರಾರು ಕೃತಿಗಳನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಸ್ತ್ರೀ ಸಾಹಿತ್ಯ ಮತ್ತು ಚಿಂತನೆ ಕನ್ನಡದಲ್ಲಿ ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯ ಪಡೆದಿದೆ. ಇಪ್ಪತ್ತನೆಯ ಶತಮಾನವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಸಾಹಿತ್ಯದ ಸ್ವರ್ಣಯುಗ' ಎಂದು ಬಣ್ಣಿಸಿದ್ದಾರೆ. ವಿಶ್ವಸುಂದರಿ ಸ್ಪರ್ಧೆಯನ್ನು ವಿರೋದಿ ಮಾತನಾಡಿದ ಶಾಂತದೇವಿ ಅವರು 'ನಾರಿಗೆ ಗುಣವೇ ಶೃಂಗಾರ ಎಂಬ ಮಾತು ನಮ್ಮ ಗಮನದಲ್ಲಿ ಇರಬೇಕು. ಹೆಣ್ಣು ಭೋಗದ ವಸ್ತುವಲ್ಲ, ಪುರುಷನಿಗೆ ಸರಿಸಮನಾಗಿ ವಿವಿಧ ರಂಗಗಳಲ್ಲಿ ಕಾರ್ಯ ಮಾಡುವ ಶಕ್ತಿ ಆಕೆಗಿದೆ' ಎಂದು ತಿಳಿಸುತ್ತಾ 'ಮಹಿಳಾ ಮೀಸಲಾತಿ ಮಸೂದೆ'ಯನ್ನು ಬೇಗನೆ ಜಾರಿಗೆ ತರುವಂತೆ ಸರಕಾರವನ್ನು ಒತ್ತಾಯಿಸಿದರು. ಮುಂದಿನ ಸಮ್ಮೇಳನದಲ್ಲಾದರೂ ಮಹಿಳೆಯ ಮುತ್ತೈದೆತನವನ್ನು ಮರೆತು, ವಿವಿಧ ರಂಗಗಳಲ್ಲಿ ಆಕೆಯ ಸಾಧನೆಯ ಮತ್ತು ಕೊಡುಗೆಯತ್ತ ಗಮನ ಹರಿಸುತ್ತಾರೆಯೆ?

- ನೇಮಿಚಂದ್ರ

ವಾರಣಾಸಿಯಲ್ಲಿ ಬಂಗಾಳಿ ವಿಧವೆಯರು

- ಸ್ವಾತಿ ಘೋಷ್

'ವಾಟರ್' ಎಂಬ ಚಲನಚಿತ್ರವೊಂದು, ಕಾಶಿಯಲ್ಲಿರುವ ಹಿಂದೂ ವಿಧವೆಯರನ್ನು ಕೀಳಾಗಿ ಚಿತ್ರಿಸಿ, ಹಿಂದೂ ಧರ್ಮದ ಪಾವಿತ್ರ್ಯಕ್ಕೆ ಕಳಂಕ ಹಚ್ಚಲು ಯತ್ನಿಸುತ್ತಿದೆ ಎಂಬ ಜೋರಾದ ವಿವಾದವೊಂದು ರಾಷ್ಟ್ರೀಯ ನೆಲೆಯಲ್ಲಿ ಹುಟ್ಟಿಕೊಂಡಿತಷ್ಟೆ. ಭಾರತೀಯ ಸಮಾಜದ ನೈತಿಕತೆಯನ್ನು ಕಾಪಾಡುವವರು ತಾವು ಎಂದುಕೊಳ್ಳುವ ಒಂದು ವರ್ಗದ ಜನರು ಈ ಚಲನಚಿತ್ರದ ಕಥೆಯನ್ನು ಪರಿಷ್ಕರಿಸಲು ಒತ್ತಡ ಎಂದು ನಿರ್ಮಿಸಿದರು. ಕೊನೆಗೆ ಹಿಂಸಾಚಾರ ನಡೆಸಿ, ಚಿತ್ರೀಕರಣ ವಾರಾಣಸಿಯಲ್ಲಿ ನಡೆಯುವಂತೆಯೂ ಮಾಡುವಲ್ಲಿ ಯಶಸ್ವಿಯಾದರು.

. ಆದರೆ 'ವಾಟರ್' ಎಂಬ ಆ ಚಲನಚಿತ್ರವೇನೂ ವಿಧವೆಯರ ವೇಶ್ಯಾಗಾರಿಕೆಯನ್ನು ಹೇಳುವ ಚಿತ್ರವಲ್ಲ; ಅಥವಾ ವಿಧವಾ ವಿವಾಹದ ತೆರೆಯ ಮೇಲಿನ ನಾಟಕವೂ ಅದಾಗಿರಲಿಲ್ಲ. ವಾಸ್ತವದಲ್ಲಿ ಅದೊಂದು ತೀವ್ರವಾದ ಪ್ರೇಮದ ಕಥೆಯಾಗಿದ್ದು, ಆಧುನಿಕ ಮಾನವ ಸಂಬಂಧಗಳ ಮೇಲೆ ಸಂಸ್ಕೃತಿಯ ನೆನಪು ಒತ್ತುವ ಛಾಪನ್ನು ಹೇಳುವ ಕೃತಿ ಅದೆಂದು ಹೇಳಲಾಗುತ್ತದೆ. ಈ ಚಿತ್ರದ ಬಹು ಮುಖ್ಯ ಕಷ್ಟದ ಸನ್ನಿವೇಶವು ಹೀಗೆ ಆಧುನಿಕತೆ, ಪರಂಪರೆಯೊಂದಿಗೆ ಮುಖಾಮುಖಿಯಾಗುವುದೇ ಆಗಿದೆ. ಕಳೆದ ಶತಮಾನದ ಸಮಾಜ ಸುಧಾರಕನೊಬ್ಬ ಒಬ್ಬಳು ಹಿಂದೂ ವಿಧವೆಯೊಂದಿಗೆ ಹೊಂದಿದ ಸಂಬಂಧವನ್ನು ಪ್ರಾಚೀನ ವಾರಾಣಸಿ ನಗರದ ಹಿನ್ನಲೆಯಲ್ಲಿ ಈ ಕತೆ ಚಿತ್ರಿಸುತ್ತದೆ. ಆದಕ್ಕಾಗಿ ಚಿತ್ರೀಕರಣಕ್ಕಾಗಿ ಆಯ್ಕೆ ಮಾಡಿದ್ದ ಸ್ಥಳದಲ್ಲಿ ವಾರಾಣಸಿಯೂ ಒಂದಾಗಿತ್ತು.

ಆದರೆ ಹಿಂದೂ ಪರಂಪರೆಯ ನೈತಿಕತೆಯ ಸಂರಕ್ಷಕರು, ನಮ್ಮ ಸಮಾಜದಲ್ಲಿ ವೈವಾಹಿಕ ಸ್ಥಾನದ ದೃಷ್ಟಿಯಿಂದ ವಿಧವೆಯರೆಂದು ಗುರುತಿಸಲ್ಪಡುವ ಮಹಿಳಾ ಗುಂಪನ್ನು ಕೇಂದ್ರವಾಗಿಟ್ಟುಕೊಂಡು ರಾಷ್ಟ್ರೀಯ ಮಟ್ಟದ ವಿವಾದವನ್ನು ಹುಟ್ಟುಹಾಕಿದ್ದು ನಿಜವಾದರೂ, ವಾರಾಣಸಿ ನಗರದ ಅನೇಕ ವಿಶಿಷ್ಟಲಕ್ಷಣಗಳಲ್ಲಿ ಅಲ್ಲಿ ನೆಲೆಸಿರುವ ವಿಧವೆಯರೂ ಸೇರಿದ್ದಾರೆ. ವಾರಾಣಸಿಯ ಧಾರ್ಮಿಕ ಸಂಸ್ಕೃತಿಯ ಪ್ರತಿನಿಧಿಗಳೆಂದು ಗುರುತಿಸಲ್ಪಡುವ ಈ ವಿಧವೆಯರಲ್ಲಿ ಹೆಚ್ಚು ಜನರು ಬಂಗಾಳದಿಂದ ವಲಸೆ ಬಂದವರೇ ಆಗಿದ್ದಾರೆ. (ಮಹಿಳೆಯರ ನಡುವಿನಿಂದ ವಿಧವೆಯರನ್ನು ಒಂದು ಪ್ರತ್ಯೇಕ ಗುಂಪಾಗಿಸಿ, ಅವರನ್ನು ಧರ್ಮದ ಹೆಸರಿನಲ್ಲಿ ಸಮಾಜದ ನೋಟದಿಂದಲೇ ಮರೆಮಾಡುತ್ತಿದ್ದ, ಒಂದು ಶತಮಾನದಷ್ಟು ಹಳೆಯದಾದ ಈ ಆಚರಣೆಯ ಚರಿತ್ರೆ, ಗಮನಾರ್ಹ. ಅದರಲ್ಲಿಯೂ ಹತ್ತೊಂಬತ್ತನೆಯ ಶತಮಾನದಲ್ಲಿ ಬಂಗಾಳದ ಮಹಿಳಾ ವಿಮೋಚನೆಯನ್ನು ಇತರರ ಬೆಲೆತೆತ್ತು ಸಾಧಿಸಿದಂಥ ಪುನರುತ್ಥಾನದ ವಿಜಯವಾಗಿದೆ ಎಂದು ಕೊಂಡಾಡಲಾಗುವ ಕಾಲಾವಧಿಯಲ್ಲೇ ವಿಧವೆಯರನ್ನು ಗಡೀಪಾರು ಮಾಡುವ ಈ ಪದ್ಧತಿ ಆರಂಭವಾಯಿತು ಎಂಬ ಕುತೂಹಲಕರ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಸ್ವಾತಿ ಘೋಷ್ ಅವರ 'Bengali widows of Varanasi' ಎಂಬ ಲೇಖನದ ಸಂಗ್ರಹಾನುವಾದ ಇಲ್ಲಿದೆ. (ಮೂಲ ಲೇಖನಕ್ಕೆ ನೋಡಿ: Economic and Political weekly, April 1-1-2000)

ಬಂಗಾಳದಲ್ಲಿ ಹಿಂದೂ ವಿಧವೆಯರು ಬಹುಹಿಂದಿನಿಂದಲೂ ಮುಖ್ಯವಾಹಿನಿಯಿಂದ ಪ್ರತ್ಯೇಕಿತ, ಬಹಿಷ್ಕೃತ ಮಹಿಳಾ ಗುಂಪುಗಳಾಗಿದ್ದು ಧಾರ್ಮಿಕ ಕಾನೂನುಗಳನ್ನು ಮಾಡಿರುವ ಪುರುಷರು. ವಿಧವೆಯವರನ್ನು ಪರಿತ್ಯಜಿಸುವ ಸಾಮಾಜಿಕ ಆಚರಣೆಯನ್ನು ಧರ್ಮದ ಹೆಸರಿನಲ್ಲಿ ಅನುಮೋದಿಸಿದರು. ವಿಧವೆಯರ ನಿರಾಕರಣೆಯನ್ನು ಕಟ್ಟೆಚ್ಚರದ ಕಾವಲಿನಡಿ ಇರಿಸಲಾಗಿತ್ತು. ಕುಟುಂಬದಲ್ಲಿ ಸಂತಾನೋತ್ಪಾದನೆಯ ಪಾತ್ರವನ್ನು ಕಳೆದುಕೊಂಡು ವಿಧವೆಯರನ್ನು ಇತರರ ಸಂತಾನೋತ್ಪಾದಕ ಕಾರ್ಯಕ್ಕೆ ನೆರವಾಗಲಿಕ್ಕೆ ಏನೂ ಖರ್ಚಿಲ್ಲದೆ ದುಡಿಮೆಗಾಗಿ ಇರಿಸಿಕೊಳ್ಳಲಾಗುತ್ತಿತ್ತು. ಹಿಂದೂ ಧಾರ್ಮಿಕ ರಚನೆಯ ಈ ಪರಿಕಲ್ಪನೆಯನ್ನು ಸ್ವತಃ ವಿಧವೆಯರೂ, ಗೃಹಿಣಿಯರೂ, ಪುರುಷವರ್ಗವೂ ಅಂತಸ್ಥವಾಗಿಸಿಕೊಂಡಿದ್ದರು. ಈ ವಿಷಯದಲ್ಲಿ ಇಸ್ಲಾಂ ಧರ್ಮ ಹೆಚ್ಚು ಉದಾರವಾಗಿತ್ತು. ಗಂಡ ತೀರಿದರೆ ಆ ಹೆಣ್ಣಿಗೆ ಮರುಮದುವೆಗೆ ಅವಕಾಶವನ್ನೂ ಆರ್ಥಿಕ ಅವಕಾಶ ಮತ್ತು ಆಸ್ತಿಯಲ್ಲಿ ಪಾಲು ಕೊಡುವುದಕ್ಕೆ ಕುಟುಂಬದ ಆಸ್ತಿಯಲ್ಲಿ ಆಕೆ ಪಾಲುಕೇಳದಂತೆ ಮಾಡುವುದೂ ಒಂದು ಕಾರಣವಿದ್ದೀತು. ಹಿಂದೂಧಾರ್ಮಿಕ ಕಾನೂನಿನಲ್ಲಿ ಮಹಿಳೆಯರಿಗೆ, ಅದರಲ್ಲೂ ತಮ್ಮ ನ್ಯಾಯಯುತ ಯಜಮಾನನಾಗಿದ್ದ ಗಂಡನನ್ನು ಕಳೆದುಕೊಂಡವರಿಗೆ, ಕುಟುಂಬದ ಆಸ್ತಿಯಲ್ಲಿ ಪಾಲು ಹಕ್ಕನ್ನು ಎಂದೂ ನೀಡಿರಲಿಲ್ಲ. ಬಂಗಾಳದಲ್ಲಿ ಕುಟುಂಬದೊಳಗೂ, ಹೊರಗೂ ವಿಧವೆಯರನ್ನು ಶೋಷಿಸಲು ಸಾಧ್ಯವಿತ್ತು. ಆದರೆ ಅಲ್ಲಿನ ಮಧ್ಯಮವರ್ಗದ ಪುರುಷರು ಸಮಾಜದ ಸಾಂಸ್ಕೃತಿಕ ಬದುಕನ್ನೂ, ವಿಧವೆಯರ ಆರ್ಥಿಕಬದುಕನ್ನೂ ನಿಯಂತ್ರಿಸುವಲ್ಲಿ ಇನ್ನೂ ಒಂದು ಹೆಜ್ಜೆ ಮುಂದಾದರು. ಆದ್ದರಿಂದಲೇ ವಿಧವೆಯರನ್ನು ಸಮಾಜದ ಅಂಚಿಗೆ ಒತ್ತರಿಸುವ ಪ್ರಕ್ರಿಯೆಗೆ ಬಂಗಾಳವು ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ಕೊಟ್ಟಿತು. ಬೇರೆ ಪ್ರದೇಶಗಳ ಹಿಂದೂಗಳು

ವಿಧವೆಯರನ್ನು ಸಮಾಜ ಮತ್ತು ಕುಟುಂಬಗಳ ಒಳಗೇ ಅಂಚಿಗೆ ಒತ್ತರಿಸಿದ್ದರೆ ಬಂಗಾಳಿಗಳು ತಮ್ಮ ಮನೆಯಿಂದಲೂ ಅವರನ್ನು ದೂರಮಾಡಿ ವಾರಾಣಸಿ, ವೃಂದಾವನ, ಮಥುರಾ, ನವದ್ವೀಪಗಳಾದ ತೀರ್ಥಕ್ಷೇತ್ರಗಳಿಗೆ ಅವರನ್ನು ರವಾನಿಸಿಬಿಡುತ್ತಿದ್ದರು. ಇದರಲ್ಲಿ ವಿಧವೆಯರಿಗೆ ಬೇರೆ ಆಯ್ಕೆ ಇರುತ್ತಿರಲಿಲ್ಲ.

ಕುಟುಂಬಕ್ಕೆ ಗಂಡು ಉತ್ತರಾಧಿಕಾರಿಯನ್ನು ಕೊಡಲಾಗದಿದ್ದ ವಿಧವೆಯರಂತೂ ಕುಟುಂಬಕ್ಕೆ ಹೊರೆಯೆಂದೇ ತೋರುತ್ತಿದ್ದರು. ಸಮಾಜದ ಕಣ್ಣುರಿಯಾಗಿ, ಸುಲಭವಾಗಿ ಲೈಂಗಿಕ ಬಲಿಪಶುಗಳಾಗುತ್ತಿದ್ದ ವಿಧವೆಯರ ಸಂಬಂಧದಲ್ಲಿಯೇ ಹಾದರ, ಅನೈತಿಕ ಸಂಬಂಧ, ವೇಶ್ಯಾಗಾರಿಕೆ, ಗರ್ಭಪಾತದಿಂದ ಸಾವು ಮುಂತಾದವು ಸಂಭವಿಸುತ್ತಿದ್ದವು. ಆದ್ದರಿಂದ ದೂರದ ಊರಿಗೆ ಅವರನ್ನು ರವಾನಿಸಿ ಬಿಡುವುದು ಅವರಿಂದ ಕೈತೊಳೆದುಕೊಂಡುಬಿಡುವ ಸುಲಭದ ದಾರಿಯಾಗಿತ್ತು. ತೀರ್ಥಕ್ಷೇತ್ರಗಳು ಹೀಗೆ ರವಾನಿಸಲು ಸೂಕ್ತ ಆಯ್ಕೆಗಳಾದವು. ಬಂಗಾಳದ ಪುರುಷರ ಧರ್ಮನಿಷ್ಠೆಗೆ ಇದೊಂದು ಸಾಕ್ಷಿಯೂ ಆಗಿತ್ತು. ಹಾಗಾಗಿ ತೀರ್ಥಕ್ಷೇತ್ರಗಳಲ್ಲಿ ದೇವಾಲಯಗಳನ್ನು ಕಟ್ಟಿಸಲಾಯಿತು, ಆಶ್ರಮಗಳನ್ನು ಸ್ಥಾಪಿಸಲಾಯಿತು. ಮೊದಲಲ್ಲಿ ಧಾರ್ಮಿಕ ಉತ್ಸಾಹದಿಂದ ಉದಾರವಾಗಿ ದಾನ ನೀಡುತ್ತಿದ್ದ ಶ್ರೀಮಂತ ಬಂಗಾಳಿಗಳ ನೆರವಿನಿಂದ ಯುವತಿಯರು, ವೃದ್ಧೆಯರಾದ ವಿಧವೆಯರ ಆರ್ಥಿಕ ಸ್ಥಾನಕ್ಕೆ ತಕ್ಕಂತೆ ಜೀವನಾಂಶವನ್ನು ನೀಡಲಾಗುತ್ತಿತ್ತು. ಕಾಲಕಳೆದಂತೆ ದಾನ ಮಾಡುವುದು ಕಡಿಮೆಯಾಗಿ, ಹೊಸದಾಗಿ ವಲಸೆಬಂದ ವಿಧವೆಯರು ತಾವೇ ದುಡಿದು ಬದುಕುವಂತೆ ಒತ್ತಾಯ ಉಂಟಾಯಿತು. ಬಂಧುಗಳಾರೂ ಇಲ್ಲದೆ, ದೂರದೂರಿನ ಆ ಪರಕೀಯ ಜಗತ್ತಿನಲ್ಲಿ, ಅತ್ಯಲ್ಪ ಜೀವನಾಂಶದೊಂದಿಗೆ ಬದುಕಲಾರದ ವಿಧವೆಯರು ದುಡಿದು, ಕೃಶರಾಗಿ ಸಾಯುವುದು ಖಚಿತವೇ ಆಗಿತ್ತು. ಹತ್ತೊಂಬತ್ತನೆಯ ಶತಮಾನದ ಬಂಗಾಳಿ ಸಾಹಿತ್ಯದಲ್ಲಿ ಇಂಥ ಅನೇಕ ನಿದರ್ಶನಗಳಿವೆ.

ಕಣ್ಣಿಂದ ದೂರ ಮಾಡಲ್ಪಟ್ಟ ಸಾಮಾಜಿಕವಾಗಿ ಬಹಿಷ್ಕೃತರಾದ ಈ ವಿಧವೆಯರು ಜನರ ಮನಸ್ಸಿನಿಂದಲೂ, ವಿಧವೆಯರ ಬಗೆಗಿನ ಸಾಮಾಜಿಕ ಚರ್ಚೆಗಳಿಂದಲೂ ಹೊರಗಾಗಿದ್ದು ಸಹಜ, ಬಂಗಾಳದ ಸಮಾಜದ ಎಲ್ಲ ವರ್ಗದಲ್ಲೂ ಇದೇ ಧೋರಣೆ ಇತ್ತೆಂದಲ್ಲ, ಶ್ರೀಮಂತ ಕುಲೀನ ಮನೆತನಗಳ ವಿಧವೆಯರು ಕುಟುಂಬಗಳೇ ಉಳಿದು, ಶಿಕ್ಷಣಕ್ಕೆ ಅವಕಾಶ ಪಡೆದು, ಆರ್ಥಿಕ ನೆರವು ಅಥವಾ ಆಸ್ತಿಯಲ್ಲಿ ಪಾಲನ್ನು ಪಡೆದಿರುತ್ತಿದ್ದರು. ಆದರೆ ಮಧ್ಯಮ ವರ್ಗದ ಸಾಮಾನ್ಯ ಜನರು ಮಾತ್ರ ಹೀಗೆ ವಿಧವೆಯರನ್ನು ದೂರವಿಡುತ್ತಿದ್ದರು. ಹೊರಗೆ ಹೋದವರನ್ನು ಜನ ಮರೆತು ಬಿಡುತ್ತಿದ್ದು, ಆ ವಿಧವೆಯರಿಗೆ ಜೀವನಾಂಶ ಕೂಡ ಕ್ರಮೇಣ ನಿಂತು ಹೋಗುತ್ತಿತ್ತು.

ಹೀಗೆ ದೂರದೂರಿಗೆ ಕಳಿಸಿಬಿಡುವುದರ ಹಿಂದೆ, ಗೃಹಕೃತ್ಯಗಳಲ್ಲಿ ವಿಧವೆಯರು ಹೊಂದಿದ್ದ ಪಾಲನ್ನು ಅವರಿಂದ ಹಿಂತೆಗೆದುಕೊಳ್ಳುವುದೂ ಒಂದು ಕಾರಣವಿದ್ದೀತು. ಗಂಡಂದಿರ ಸಾವಿನೊಂದಿಗೇ ವಿಧವೆಯರ ಸಂತಾನೋತ್ಪಾದಕ ಪಾತ್ರ ದಿಢೀರನೆ ಸೊನ್ನೆಯಾಗಿಬಿಟ್ಟು. ಅವರು ಹೊರೆಯೆನಿಸಿಬಿಡುತ್ತಿದ್ದರು. ಹೀಗಾಗಿ ದೀರ್ಘ ಅವಧಿಯ ಕಷ್ಟದ ಕೆಲಸಗಳಿಗೆ ಅವರನ್ನು ದುಡಿಯಲು ಹಚ್ಚಿ, ಅತ್ಯಲ್ಪ ಪ್ರಮಾಣದ ಕಳಪೆ ಆಹಾರವನ್ನು ನೀಡುವುದು ಇತ್ತು. ವಿಧವೆಯರ ಮೇಲೆ ಬಂಗಾಳದ ಪಿತೃಪ್ರಾಧಾನ್ಯವು ಒಳಗಿನಿಂದ ಹೀಗೆ ನಿಯಂತ್ರಣ ಹೊಂದಿರುವುದು 19ನೆಯ ಶತಮಾನದ ಸಮಾಜ ಸುಧಾರತೆ ಪುರುಷವರ್ಗಕ್ಕೆ ಗಮನಕ್ಕೆ ಬರದೆ ಹೋಗಿದ್ದಕ್ಕೆ ಬಹುಶಃ ಈ ಪ್ರದೇಶ ದೇಶದ ಇತರ ಭಾಗಗಳಿಗಿಂತ ತುಂಬ ಮೊದಲು ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಗೆ ಒಳಗಾಗುತ್ತಿದ್ದುದು ಕಾರಣವಾಗಿತ್ತು.

ಬಂಗಾಳದಲ್ಲಿ 19ನೆಯ ಶತಮಾನದಲ್ಲಿ ಹೊಮ್ಮಿಬಂದ ರಾಷ್ಟ್ರೀಯತಾವಾದಿ ಪಿತೃಸಂಸ್ಕೃತಿಯು 'ಕುಟುಂಬ'ವನ್ನು ಸಾಮಾಜಿಕ ಬದಲಾವಣೆಯ ನೆಲೆಯನ್ನಾಗಿ ರೂಪಿಸುವತ್ತ ಮಗ್ನವಾಗಿದ್ದು, ಮಹಿಳೆಯರ ವಿಮೋಚನೆಯ ಪ್ರಶ್ನೆಯು ಮಹಿಳೆಯರನ್ನು ಪತ್ನಿ ಮತ್ತು ಮಾತೆಯ ಹೊಸರೂಪದಲ್ಲಿ ರಚಿಸುವತ್ತ ಆಸಕ್ತವಾಗಿತ್ತು. ವಿಧವೆಯು ಈ ಹೊಸಮಹಿಳಾ ಪಾತ್ರಕ್ಕೆ ಎಂದೋ ಹೊರಗಿದ್ದವಳು. ಅಚ್ಚ ಬಿಳಿವಸ್ತ್ರದ ಬಿಳುಚಿಕೊಂಡ, ಬಂಜೆ ವಿಧವೆ ಭಾರತೀಯ ಪರಂಪರೆಯ ಪರಿಶುದ್ಧತೆಗೆ ಸಂಕೇತವಾದಳು. ವಸಾಹತು ಇಂಡಿಯಾದಲ್ಲಿ ಪಾಶ್ಚಿಮಾತ್ಯ ಶಿಕ್ಷಣ, ಅವರ ಮುಕ್ತಸಂಸ್ಕೃತಿ ಜೀವನ ವಿಧಾನಗಳೆಲ್ಲ ವೇಗವಾಗಿ ಇಲ್ಲಿನ ಜೀವನದೊಳಗೆ ಪ್ರವೇಶಿಸುತ್ತಿದ್ದಾಗ ಭಾರತದ ಆಧ್ಯಾತ್ಮಿಕ ಪಾವಿತ್ರ್ಯವನ್ನು ವಸಾಹತುಶಾಹಿಯ ಆಧುನಿಕತೆಯ ವಿರುದ್ಧ ಎತ್ತಿಹಿಡಿಯಲಾಯ್ತು. ಈ ಆಧ್ಯಾತ್ಮಿಕ ಪರಿಶುದ್ಧತೆಗೆ ಅಕಳಂಕಿತ ಚಿನ್ಹೆಯೆನಿಸಿದವರು ವಿಧವೆಯರು.

ಸತಿಪದ್ಧತಿ ರದ್ದತಿಯ ಕಾನೂನು (1829) ವಿಧವಾ ಪುನರ್ವಿವಾಹ ಕಾನೂನು (1856) ಗಳು ಬಂಗಾಳದಲ್ಲಿ ಜಾರಿಗೆ, ಬಂದವು, ಸ್ತ್ರೀಶಿಕ್ಷಣ ನಿಧಾನವಾಗಿ ಬೆಳೆಯಿತು. ವಿಧವೆಯರು ಮೋಕ್ಷಸಾಧನವೆಂದು ಸತಿ ಹೋಗಲು ನಿರಾಕರಿಸತೊಡಗಿದರು. ಸಂಸ್ಕೃತಿಯ ಗಂಧವಿಲ್ಲದವರೆಂದು ತಿರಸ್ಕೃತರಾಗಿದ್ದ ಗೃಹಿಣಿಯರನ್ನು ಹೆಚ್ಚು ಸುಸಂಸ್ಕೃತರಾಗಲು ಪಾಶ್ಚಿಮಾತ್ಯ ಶಿಕ್ಷಣ ಪಡೆಯಲು ಪ್ರೇರೆಪಿಸಿ, ಪ್ರೋತ್ಸಾಹಿಸಲಾಗುತ್ತಿತ್ತು. ಈ ರೀತಿ ಮಹಿಳೆಯ ಹೊಸ ರೂಪಕವೊಂದು ಹೊಮ್ಮಿ ಬಂದಿತ್ತು. ಸಾಮಾನ್ಯ

ಗೃಹಿಣಿ ಈಗ ಆಧುನಿಕ ಪುರುಷನ ಅರ್ಹ ಅರ್ಧಾಂಗಿಯೆನಿಸಲು ಸುಶಿಕ್ಷಿತ, ಸುಸಂಸ್ಕೃತಿ, ಪತ್ನಿ ಮತ್ತು ಮನೆಯನ್ನು ಪ್ರೀತಿಸುವ ವಾತ್ಸಲ್ಯಮಯಿ ಮಾತೆ ಕೂಡ ಆಗಲು ಶ್ರಮಿಸಬೇಕಾಯಿತು. ಗೃಹಕೃತ್ಯಗಳಿಗೆ ಕರ್ತವ್ಯಗಳಿಗೆ ಭಂಗ ಬಾರದಂತೆ ಹೊರಗು ಗೌರವಾನ್ವಿತ ಉದ್ಯೋಗಗಳಲ್ಲಿ ತೊಡಗಲು ಇವರಿಗೆ ಅವಕಾಶ ಕಲ್ಪಿಸಲಾಗುತ್ತಿತ್ತು. ಹೀಗೆ ಮಹಿಳೆಯ ಉತ್ಪಾದಕ ಸಾಮರ್ಥ್ಯದ ಅಭಿವ್ಯಕ್ತಿಗೆ ಹೊಸ ಅವಕಾಶಗಳು ನಿರ್ಮಾಣಗೊಂಡವು.

ಆದರೆ, ಈ ಹೊಸ ಬದಲಾದ ಹೆಣ್ಣಿನ ಪಾತ್ರದೊಳಕ್ಕೆ ವಿಧವೆಯರಿಗೆ ಪ್ರವೇಶವಿದ್ದಿಲ್ಲ. ಸತಿಯಿಲ್ಲದ ಹೆಣ್ಣಿಗೆ 'ಬಿಡುಗಡೆ' 'ಸುಸಂಸ್ಕರಣ' ಗಳ ಅವಶ್ಯಕತೆಯೇ ಅಸಂಗತವಾಗಿ ಬಿಡುತ್ತಿತ್ತು. ಗಂಡಸರ ಸಂಬಂಧದಲ್ಲಷ್ಟೇ ಹೆಣ್ಣಿನ ಬೆಳವಣಿಗೆ ಹೊರಗಿನ ಉತ್ಪಾದಕತೆಗಳೆಲ್ಲ ಅರ್ಥಪೂರ್ಣವೆನಿಸುತ್ತಿದ್ದುದರಿಂದ ವಿಧವೆಯರಿಗೆ ಶಿಕ್ಷಣ, ಉದ್ಯೋಗಗಳಿಗೆ ಬದಲಾಗಿ ಪರಂಪರಾಗತ ಧಾರ್ಮಿಕ ವಿಧಿಗಳ ಪಾಲನೆಯಲ್ಲಿ ಶಾಂತಿಯನ್ನು ಪಡೆಯಲಿ ಎಂದೇ ಸಮಾಜದ ನಿರೀಕ್ಷೆಯಿರುತ್ತಿತ್ತು. ಮಕ್ಕಳು ವಿಧವೆಯರು ಒಟ್ಟು ಸಾಂತಾನೋತ್ಪಾದಕತೆಯ ಉದ್ದೇಶಗಳೆರಡೂ ಇಲ್ಲದ್ದರಿಂದ ಮನೆಯವರಿಗೆ ಅನಪೇಕ್ಷಿತ ವ್ಯಕ್ತಿಗಳಾಗಿ, ಮನೆಯಿಂದ ಬಹುದೂರ ಸಾಗಿಸಲ್ಪಡುತ್ತಿದ್ದರು. ಮನೆಯಿಂದ ದೂರವಾಗಿದ್ದಾಗಷ್ಟೇ ಅವರಿಗೆ ಧಾರ್ಮಿಕ ಅಸ್ತಿತ್ವವೊಂದನ್ನು ದಯಪಾಲಿಸಲಾಗುತ್ತಿತ್ತು.

19ನೇ ಶತಮಾನದಲ್ಲಿ ವೇಶ್ಯಾಜೀವನ ಕ್ರಮ ಹೆಚ್ಚುವುದಕ್ಕೆ ವಿಧವೆಯರ ಕಾಣಿಕೆಯೂ ದೊಡ್ಡದೇ ಇತ್ತು. ಆದರೆ ಹಿಂದೂ ಭಾರತದ ಪಾವಿತ್ರ್ಯ ಮತ್ತು ದೇವಿಕಾಂಶದ ಪ್ರತೀಕವೆನಿಸಿದ್ದ ವಿಧವೆಯರನ್ನು ವೇಶ್ಯೆಯರೆಂದು ಸಾಮಾನ್ಯ ಭೋಗಸ್ತ್ರೀಯರೆಂದು ಕರೆಯುವುದು ಸಾಧ್ಯವಿರಲಿಲ್ಲ. ಆದರೆ ಅನೈತಿಕ ಅಂಶಗಳಿಂದ ಸಾಮಾಜಿಕ ಪರಿಸರ ಕಲುಷಿತವಾಗುತ್ತಿರುವುದಕ್ಕೆ ವೇಶ್ಯೆಯರನ್ನು ಸುಲಭವಾಗಿ ಆರೋಪಿಗಳನ್ನಾಗಿಸಲು ಸಾಧ್ಯವಿತ್ತು. 1868 ರಲ್ಲಿ ನಗರದ ವಸತಿ ಪ್ರದೇಶಗಳಿಂದ ವೇಶ್ಯಯರನ್ನು ಹೊರದೂಡಬೇಕು ಎಂಬ ಸಾಮಾಜಿಕ ಕೂಗು ಎದ್ದಿತು. ಆದರಂತೆ ನಗರದ ನಿರ್ದಿಷ್ಟ ಸ್ಥಳದಲ್ಲಷ್ಟೇ ಅವರಿಗೆ ವಾಸಿಸಲು ಅವಕಾಶ ನೀಡಲಾಯಿತು. ಆದರೆ ಈ ಶುದ್ಧೀಕರಣದ ಪ್ರಕ್ರಿಯೆಯಲ್ಲಿ ವಿಧವೆಯರ ಹೆಸರನ್ನು ಎತ್ತಲಿಲ್ಲ. ಆದರೆ ಧಾರ್ಮಿಕ ಪಾವಿತ್ರ್ಯ, ಪರಿಶುದ್ಧಿಗಳನ್ನು ಕಾಯ್ದಿಡುವುದು ಅಷ್ಟು ಸುಲಭವಿರಲಿಲ್ಲ. ಆದ್ದರಿಂದ ಬಂಗಾಳಿಗಳು ಎರಡನೇ ಮನೆಯಂತೆ ಭಾವಿಸಿದ್ದ ಕಾಶಿಗೆ ಈ ವಿಧವೆಯರನ್ನು ರವಾನಿಸುವುದು ಅವಶ್ಯಕವಾಯ್ತು. ಅದೇ ರೀತಿ ಹಿಂದೂ ಮತ ಪಂಥಗಳ ಪೈಕಿ ಹೆಚ್ಚು ಉದಾರವಾದಿಗಳಾದ ವೇಶ್ಯೆಯವರೇ ಪ್ರಬಲವಾಗಿದ್ದ ವೃಂದಾವನ, ಮಥುರೆಗಳಿಗೂ ವಿಧವೆಯರ ರವಾನೆ ಆರಂಭವಾಯಿತು. ಧಾರ್ಮಿಕವಾಗಿ ಪಾವಿತ್ರ್ಯದ ಸಂಕೇತಗಳೆನಿಸಿದ್ದ ಈ ಕ್ಷೇತ್ರಗಳು ತಮ್ಮ ವಿಧವಾಸ್ತ್ರೀಯರಿಗೆ ಸ್ವರ್ಗದಂಥ ನೆಲೆಗಳೆಂದೇ ಬಂಗಾಳಿಗಳು ಭಾವಿಸಿಕೊಂಡರು.

ಪುನರುತ್ಥಾನ ಕಾಲದ ಬಂಗಾಳದಲ್ಲಿ ಪಿತೃ ಸಂಸ್ಕೃತಿಯೊಳಗಿನ ಮಹಿಳಾಸ್ಥಾನ ಮರುಹೊಂದಾಣಿಕೆಗೆ ಒಳಗಾಗುತ್ತಿದ್ದ ಕ್ಲಿಷ್ಟವಾದ ಸಂಕ್ರಮಣ ಕಾಲದಲ್ಲಿ ವಿಧವೆಯನ್ನು ಅಂಚಿಗೋತ್ತರಿಸುವ ಈ ವಿಧಾನ ಹುಟ್ಟಿಬಂದಿತ್ತು ಮುಂದೆ ಮಧ್ಯಮ ವರ್ಗದ ಮಹಿಳೆಯರ ಜೀವನದಲ್ಲಿ ಅನೇಕ ಬದಲಾವಣೆಗಳಾದವು. ಆದರೆ ಈ ಬದಲಾವಣೆಗಳೆಲ್ಲ ವಿಧವೆಯರ ಬೆಲೆ ತೆತ್ತು ಸಾಧಿಸಿದಂಥವು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ವಿವಾಹಕಾನೂನುಗಳು, ಆಸ್ತಿಹಕ್ಕುಗಳು, ಜೀತಪದ್ಧತಿ ಮುಂತಾದುವನ್ನು ಸುಧಾರಿಸುವ ಯತ್ನಗಳು ಕಾರ್ಯರೂಪಕ್ಕೆ ಬಂದವು. ಇವೆಲ್ಲದರ ಪರಿಣಾಮವಾಗಿ ಹೊಸದಾಗಿ ವಿಧವೆಯರು ವಲಸೆ ಹೋಗುವುದು ನಿಂತಿತು. ವಿಧವೆಯು ಸಮಾಜದ ಮುಖ್ಯವಾಹಿನಿಯಲ್ಲಿ ಸೇರುಪಂತಾಯ್ತು. ಸಾಂಪ್ರದಾಯಿಕ ಪಾವಿತ್ರ್ಯಕ್ಕೆ ಅವರು ಹಣೆಪಟ್ಟಿ ಹೊರುವುದು ತಪ್ಪಿತು.

ಪಶ್ಚಿಮ ಬಂಗಾಳ ಸರ್ಕಾರವು ಇತ್ತೀಚೆಗೆ ವೃಂದಾವನದಲ್ಲಿ ನೆಲೆಸಿರುವ ಬಂಗಾಳಿ ವಿಧವೆಯರ ಸ್ಥಿತಿಗತಿಗಳ ಸಮೀಕ್ಷೆಯ ಕೆಲಸಕ್ಕಾಗಿ ಅಲ್ಲಿನ ಮಹಿಳಾ ಕಮಿಷನ್ನಿಗೆ ಆದೇಶಿಸಿದ್ದು, ಅದರ ವರದಿ ಇನ್ನೂ ಪ್ರಕಟವಾಗಿಲ್ಲ. ಆದರೆ ಆ ರಾಜ್ಯದ ಸಮಾಜಕಲ್ಯಾಣ ಸಚಿವರು ಕೊಟ್ಟಿರುವ ಹೇಳಿಕೆ ಪ್ರಕಾರ, 1991ರ ಜನಗಣತಿಯಲ್ಲಿ ಈ ವಿಧವೆಯರ ಸಂಖ್ಯೆ 10,000 ದಷ್ಟಿದ್ದದ್ದು ಕಳೆದ ಜನವರಿ, 2000ದ ವೇಳೆಗೆ ಕೇವಲ 3,500ಕ್ಕೆ ಇಳಿದಿದೆಯಂತೆ. ಇವರಿಗೆ ಅವಶ್ಯಕತೆಗೆ ತಕ್ಕಂತೆ ಆರ್ಥಿಕ ನೆರವು, ಪುನರ್ವಸತಿ ಕಲ್ಪಿಸುವ ಭರವಸೆಯನ್ನು ನೀಡಲಾಗಿದೆ.

ಇಷ್ಟರೊಳಗೆ, 'ವಾಟರ್' ಚಲನಚಿತ್ರದ ಚಿತ್ರೀಕರಣದ ಸ್ಥಳ ಕೂಡ ಪಶ್ಚಿಮ ಬಂಗಾಳಕ್ಕೆ ಬದಲಾಗಿದೆ. ಒಂದು ಶತಮಾನದಿಂದಲೂ ಬಂಗಾಳಿ ವಿಧವೆಯರು ವಾಸಿಸುತ್ತಿರುವ ವಾರಾಣಾಸಿ ಅಥವಾ ವೃಂದಾವನಕ್ಕಿಂತ ಪಶ್ಚಿಮ ಬಂಗಾಳದಲ್ಲಿನ ಸಾಮಾಜಿಕ - ಆರ್ಥಿಕ ಪರಿಸರ ಹೆಚ್ಚು ಉದಾರವಾಗಿ ಕಾಣಿಸುತ್ತಿದೆ. ಚಿತ್ರಕಥೆಯಲ್ಲೂ ಯಾವೊಂದು ಹೊಂದಾಣಿಕೆಯ ಅವಶ್ಯಕತೆ ಕಂಡು ಬಂದಿಲ್ಲ. ಚಿತ್ರನಿರ್ಮಾಪಕರ ಕಲಾತ್ಮಕ ಸ್ವಾತಂತ್ರ್ಯಕ್ಕೆ ಕಳೆದ ಶತಮಾನದಲ್ಲೀ ಈ ನಾಡು ವಿಧವೆಯರ ಮೇಲೆ ನಡೆಸಿದ ದುರಾಚಾರಕ್ಕೆ ಇದು ಒಂದು ಪ್ರಾಯಶ್ಚಿತ್ತ ವಿರಬಹುದೆ? ಅಥವಾ ಬೇರೆ ರಾಜ್ಯಗಳು ಕಲ್ಪಿಸಲು ಸಾಧ್ಯವಿಲ್ಲದಂಥ ಉದಾರವಾದ ಸಾಂಸ್ಕೃತಿಕ ಪರಿಸ್ಥಿತಿ ಪಶ್ಚಿಮ ಬಂಗಾಳಕ್ಕಿದೆ ಎಂದು ಸಾರುವ ಮತ್ತೊಂದು ರಾಜಕೀಯದ ಆಟವೇ ಇದು ?

ಕನ್ನಡ ರೂಪ : ಬಿ. ಎನ್. ಸುಮಿತ್ರಾ ಬಾಯಿ

ಕಡ್ಡಿ ದೇಹಕ್ಕಾಗಿ ಜೀವ ಬಿಟ್ಟವರು

-ನೇಮಿ

ಇದು ಬರೀ 'ದೇಹ ಪ್ರದರ್ಶನದ ಸೌಂದರ್ಯ'ವಲ್ಲ 'ಬುದ್ಧಿವಂತಿಕೆ'ಯನ್ನೂ ಪರೀಕ್ಷಿಸುತ್ತೇವೆ, ಎಂದು 'ವಿಶ್ವಸುಂದರಿ ಸಂಘಟನೆ'ಗಳು ಪ್ರತಿ ಬಾರಿ ಸಾರಿದ್ದೂ ಸಾರಿದ್ದೆ. ಅದನ್ನೇ ಎಲ್ಲಾ ವೇದಿಕೆಯಲ್ಲೂ ಮಾಜಿ ಸುಂದರಿಯರು, ಹಾಜಿ ಸುಂದರಿಯರು, ಸೌಂದರ್ಯ ಸ್ಪರ್ಧೆಯನ್ನು ಬೆಂಬಲಿಸಿಯೇ ಸುಂದರರಾದೆವೆಂದುಕೊಂಡವರು ಬಾಯಿಪಾಠ ಒಪ್ಪಿಸಿದ್ದೂ ಒಪ್ಪಿಸಿದ್ದೆ. ಆದರೆ ಇಲ್ಲಿಯವರೆಗೂ ಒಂದಿಷ್ಟು ಮೈತುಂಬಿಕೊಂಡ ಹೆಣ್ಣು ತನ್ನ ಬುದ್ಧಿಮತ್ತೆಯಿಂದಲೇ 'ಸೌಂದರ್ಯ ರಾಣಿ' ಕಿರೀಟ ಗಿಟ್ಟಿಸಿರುವುದುನ್ನು ನೀವೂ ನೋಡಿಲ್ಲ, ನಾವೂ ನೋಡಿಲ್ಲ. 'ಇಷ್ಟಿಷ್ಟೇ ಅಳತೆಗಳು, ಇದೇ ಸೌಂದರ್ಯ' ಎಂದು ಬಿತ್ತುವ ಜಾಹಿರಾತುಗಳ ಅಬ್ಬರದಲ್ಲಿ ಹೆಣ್ಣು ತನ್ನೆಲ್ಲ ಸಾಧ್ಯತೆಗಳನ್ನು ಮರೆಯುವುದಷ್ಟೆ ಅಲ್ಲ, ದೇಹ ಸೌಂದರ್ಯದ ಗೀಳಿನಲ್ಲಿ ರೋಗಗ್ರಸ್ಥರಾಗುತ್ತಾರೆಂದು ಗೊತ್ತೆ? 'ಸಣ್ಣಗಿದ್ದಷ್ಟೂ ಚೆನ್ನ' ಎನ್ನುವ ಸೌಂದರ್ಯ ಸ್ಪರ್ಧೆಗಳು ಹುಡುಗಿಯರು ಕಡ್ಡಿ ದೇಹದ ಆಸೆಯಲ್ಲಿ ಅರ್ಧ ಜೀವವಾಗುವಂತೆ ಮಾಡುತ್ತಿವೆ.

ಅಮೇರಿಕದಲ್ಲಿ ತೆಳುದೇಹದ ಗೀಳಿನಲ್ಲಿ, ಉಪವಾಸ ಬಿದ್ದು, ಒಂದು ವರ್ಷಕ್ಕೆ 1,50,000 ಎಳೆಯ ಯುವತಿಯರು 'ಅನೊರೆಕ್ಸಿಯಾ' ಎಂಬ ರೋಗಕ್ಕೆ ಬಲಿಯಾಗಿ ಸಾಯುತ್ತಾರೆ ಎಂದರೆ ಆಶ್ಚರ್ಯವಾಗಬಹುದು. ಈ ರೋಗವನ್ನು ನಾವು ಭಾರತದಲ್ಲಿ ಕಂಡಿರಲಿಲ್ಲ. ಶಿಲಾಬಾಲಕಿಯರಂತೆ ಮೈತುಂಬಿಕೊಂಡು ಆರೋಗ್ಯವಂತರಾಗಿ ಕಾಣುವುದು ಇಲ್ಲಿಯವರೆಗೂ ಭಾರತೀಯ ಸೌಂದರ್ಯದ ಪರಿಕಲ್ಪನೆಯಾಗಿತ್ತು. ಆದರೆ ಪರದೇಶದ ಎಲ್ಲವನ್ನೂ ಕೊಂಡು ತಂದ ಮೇಲೆ ಅನೊರೆಕ್ಸಿಯಾ ಬುಲಿಮಿಯಾಗಳಂತಹ ರೋಗಗಳನ್ನು ಹಿಂದೆ ಬಿಡಲು ಸಾಧ್ಯವೆ? ಭಾರತದ ಸುಂದರಿಯರು ಕಿರೀಟ ಗೆದ್ದು ತರಲು ಆರಂಭವಾಗುತ್ತಿದ್ದಂತೆ, ಈ ರೋಗಗಳು ಭಾರತದಲ್ಲೂ ತಲೆದೋರತೊಡಗಿದವು. ಕೆಲವು ವರ್ಷಗಳ ಹಿಂದೆಯೇ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ತಿಂಗಳಿಗೆ ಐದು ಇಂಥ ಕೇಸುಗಳು ದಾಖಲಾಗತೊಡಗಿದ್ದವು. ಇಂದು ಇಡೀ ಭಾರತದಲ್ಲಿ ಇವರ ಸಂಖ್ಯೆ ಎಷ್ಟೆಂದು ಗಂಭೀರವಾಗಿ ಯಾರೂ ಅಂಕಿ ಸಂಖ್ಯೆ ಕಲೆ ಹಾಕಿಲ್ಲ ತಲೆ ಕೆಡಿಸಿಕೊಂಡಿಲ್ಲ. ವಿದೇಶದ ಸೌಂದರ್ಯ ಸಾಧನಗಳೊಡನೆ ನಾವು ಈ ಸೌಂದರ್ಯದ ಗೀಳುರೋಗಗಳನ್ನೂ ಕೊಂಡು ತಂದಿದ್ದೇವೆ.

'ಸಣ್ಣಗಿದ್ದಷ್ಟೂ ನೀನು ಸುಂದರಿ' ಎನ್ನುವ ಸೌಂದರ್ಯ ಲೋಕದ ಒಡತಿಯರಾಗಲು ಹುಡುಗಿಯರು ಏನು ಮಾಡಲೂ ಸಿದ್ಧವಿದ್ದಾರೆ. ಇಂದು ಸೌಂದರ್ಯ ಸ್ಪರ್ಧೆಗೆ ಹುಡುಗಿಯರನ್ನು ತಯಾರಿಸುವ 'ಫಿಟ್‌ನೆಸ್ ಟ್ರೈನರ್ಸ್ ಮತ್ತು ಡಯಟೀಷಿಯನ್'ಗಳು ಮಾಡುವ ಮೊದಲ ಕೆಲಸ, ಹುಡುಗಿಯರನ್ನು ಉಪವಾಸ ಕೆಡವಿ ಕಡ್ಡಿಯಾಗಿಸುವುದು. ಈ ಬಾರಿ ವಿಶ್ವಸುಂದರಿಯಾದ ಲಾರಾ ದತ್ತ ಕಿರೀಟ ಗೆದ್ದೊಡನೆ ಹೇಳಿದ್ದು - 'ನನಗೆ ಹಸಿವಾಗಿದೆ, ನಾ ಮೊದಲು ಮಾಡಲಿರುವ ಕೆಲಸ ಎಂದರೆ ತಿನ್ನುವುದು.

ಇಂದು ಸುಂದರಿಯರನ್ನು ನಿಜಕ್ಕೂ ಏಳು ಮಲ್ಲಿಗೆ ತೂಕಕ್ಕಿಳಿಸಲು ನೋಡುತ್ತಾರೆ. ಅಮೆರಿಕದ 'ಜಾನ್ ಹ್ಯಾಪ್ಕಿನ್ಸ್ ಪಬ್ಲಿಕ್ ಹೆಲ್ತ್ ಸರ್ವಿಸ್' ಇತ್ತೀಚೆಗೆ ನಡೆಸಿದ ಅಧ್ಯಯನದ ಪ್ರಕಾರ 1922 ರಿಂದ 1999ರವರೆಗಿನ 'ಮಿಸ್ ಅಮೆರಿಕ' ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದವರನ್ನು ನೋಡಿದಾಗ, ಅವರ ತೂಕ ಶೇಖಡಾ 12ರಷ್ಟು ಕುಗ್ಗಿರುವುದು ತಿಳಿದು ಬಂದಿದೆ. ಕೀರಿಟದ ಖುಷಿಯಲ್ಲಿ ಮೈಮರೆತ ಭಾರತ ಇನ್ನೂ ಎಚ್ಚೆತ್ತುಕೊಂಡಿಲ್ಲ. ಆದರೆ ಇತರ ದೇಶಗಳು ಒಂದಿಷ್ಟು ಕ್ರಮ ತೆಗೆದುಕೊಳ್ಳುತ್ತಿವೆ. ಬ್ರಿಟನ್ನಿನ 'ಫ್ಯಾಷನ್ ಪತ್ರಿಕೆಗಳ ಉದ್ಯಮರಂಗ' ರೂಪದರ್ಶಿಯರಿಗೆ ಕನಿಷ್ಠ ಜಾಹಿರಾತುಗಳನ್ನು ನಿಷೇಧಿಸುವಂತೆ ಕರೆ ನೀಡಿದೆ.

ಇಂದು ಜಗತ್ತಿನಲ್ಲಿ 70 ಲಕ್ಷ ಮಹಿಳೆಯರು ಅನೊರೆಕ್ಸಿಯಾ ಅಥವಾ ಬುಲಿಮಿಯಾದಿಂದ ನರುಳುತ್ತಿದ್ದಾರೆ ಎಂದು ನಿಮಗೆ ಗೊತ್ತೆ? ಇವರಲ್ಲಿ ಶೇಕಡಾ ಆರರಷ್ಟು ಮಹಿಳೆಯರು ಈ ಕಾಯಿಲೆಗಳಿಂದ ಸಾಯುತ್ತಾರೆ. ಕೇವಲ ಶೇಕಡ 50ರಷ್ಟು ಮಂದಿ ಗುಣವಾಗುತ್ತಾರೆ. ಅನೊರೆಕ್ಸಿಯಾಗೆ ಬಲಿಯಾದವರಿಗೆ ಎಷ್ಟು ಸಣ್ಣಗಿದ್ದರೂ ತೃಪ್ತಿ ಇರುವುದಿಲ್ಲ. ಬುಲಿಮಿಯಾಗಿ ವಶವಾದವರು, ಆಸೆಯಿಂದ ತಿಂದು ಬಿಡುತ್ತಾರೆ, ತಿಂದೊಡನೆ ವಾಂತಿ ಮಾಡಿಕೊಳ್ಳುತ್ತಾರೆ. ಅರ್ಜೆಂಟೈನಾದಲ್ಲಂತೂ ಹತ್ತರಲ್ಲಿ ಒಬ್ಬ ಕಿಶೋರ ಹುಡುಗಿ ತಿನ್ನುವ ವ್ಯಾಧಿಗೆ (eating disorder) ಬಲಿಯಾಗಿದ್ದಾಳೆ. ಉಪವಾಸ ಬೀಳುವುದು, ನಂತರ ತಡೆಯಲಾರದೆ ವಿಪರೀತ ತಿನ್ನುವುದು, ತಿಂದದ್ದೆಲ್ಲವನ್ನು ವಾಂತಿ ಮಾಡುವುದು, ವಿಪರೀತ ವ್ಯಾಯಾಮ ಮಾಡಿ ದೇಹ ದುಡಿಸುವುದು, ದಿಡೀರ್ ಸಣ್ಣಗಾಗಿಸುವ ಮಾತ್ರೆ ನುಂಗುವುದು ಇಂಥ ವಿಷವರ್ತುಲದಲ್ಲಿ ಸಿಕ್ಕಿ ಬಿದ್ದಿದ್ದಾರೆ. ಅನೊರೆಕ್ಸಿಯಾ ರೋಗಿಗಳಿಗೆ ತಮ್ಮ ದೇಹದ ಬಗ್ಗೆ ಎಲ್ಲಿಲ್ಲದ ಕೀಳರಿಮೆ, ಅದು ತಾವು ಬಯಸಿದ್ದಷ್ಟು ಸಣ್ಣಗಿಲ್ಲ ಎಂಬ ಆತಂಕ. ಕೋಣೆಯಲ್ಲಿ ಅವಿತುಕೊಂಡು ಉಪವಾಸ ಬೀಳುತ್ತಾರೆ. ಅನೊರೆಕ್ಸಿಯಾ ಬಹಳ ಬಾರಿ ಬುಲಿಮಿಯಾಗೆ ತಿರುಗಿ 'ತಿನ್ನುವುದು, ತಿಂದ ಮೇಲೆ

ವಾಂತಿ ಮಾಡುವುದು' ಆರಂಭವಾಗುತ್ತದೆ. ದಿನಕ್ಕೆ 20 ಬಾರಿಯಷ್ಟು ವಾಂತಿ ಮಾಡುವುದೂ ಉಂಟು. ಅವರ ದೈನಂದಿಕ ಬದುಕು ಗೊಂದಲಗೊಂಡು ಅಸಹ್ಯಕರವಾಗಿ, ದೇಹದ ಚೋದಕ ಸ್ರಾವಗಳು ಯದ್ವಾತದ್ವಾ ಕೆಲಸ ಮಾಡುತ್ತವೆ. ತಿಂಗಳು ತಿಂಗಳು ಹೊರಗಾಗುವುದು ನಿಲ್ಲಬಹುದು, ಲೆಂಗಿಕ ಆಸಕ್ತಿ ಸಂಪೂರ್ಣ ಕುಗ್ಗಬಹುದು, 'ನಾನು ಕುರೂಪಿಯಾಗಿದ್ದೇನೆ, ಸಣ್ಣಗಿಲ್ಲ' ಎಂದು ಸಾಮಾಜಿಕ ಸಂಪರ್ಕದಿಂದ ದೂರ ಓಡಬಹುದು.

ಇಂದು ವಿದೇಶಗಳಲ್ಲಿ ಅನೊರಿಕ್ಸಿಯಾ ಬುಲೀಮಿಯಾ ವಿರುದ್ಧ ಹೋರಾಡಲು ಸಂಘ ಸಂಸ್ಥೆಗಳು ಹುಟ್ಟಿಕೊಂಡಿವೆ. 'ಅಸೋಸಿಯೇಷನ ಫಾರ್ ಫೈಟಿಂಗ್ ಬುಲಿಮಿಯಾ ಅಂಡ್ ಅನೊರೆಕ್ಸಿಯಾ'ದ ವೈದ್ಯ ನಿರ್ದೇಶಕ ಡಾ. ಮಾಬೆಲ್ ಬೆಲ್ಲೋ 'ದಶಕ ದಶಕಗಳ ಭ್ರಷ್ಟ ರಾಜಕಾರಣ, ಮಿಲಿಟರಿ ಸರ್ವಾಧಿಕಾರದಡಿಯಲ್ಲಿ ನರಳಿದ ಅರ್ಜೆಂಟೈನಾಗೆ ಕಪ್ಪು ಇತಿಹಾಸವಿದೆ. ಅಂತಹ ಕತ್ತಲೆಯ ಸಾಮಾಜಿಕ ಚರಿತ್ರೆ ಇರಲೇ ಇಲ್ಲವೆಂಬಂತೆ ನಟಿಸಿ, ಮರೆತು ಬಿಟ್ಟವೆಂದು ತಿಳಿದು, ಇತಿಹಾಸದ ಕುರೂಪವನ್ನು ಮೇಲ್ಮೇಲೆ ಕಾಸ್ಮೆಟಿಕ್ ಆಗಿ ಮರೆಮಾಚಿ ಮುಸುಕೆಳೆದು, 'ನಾವು ಅತ್ಯಂತ ಸುಂದರಿಯರು', ಎಂದು ಬೀಗುತ್ತಾ ನಂಬುವ ವ್ಯರ್ಥ ಪ್ರಯತ್ನ ನಡೆದಿದೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸೌಂದರ್ಯ ಸ್ಪರ್ಧೆಗಳು ಯಥೇಚ್ಛ ಹಣ ಮತ್ತು ಗ್ಲಾಮರ್ ತೊಡಗಿರುವ ಉದ್ಯಮಗಳು. ಸೌಂದರ್ಯ ಸ್ಪರ್ಧೆಯಿಂದ ಧಾರಾಳವಾಗಿ ಹಣ ದೋಚಿಕೊಳ್ಳುವ ಗ್ಲಾಮರ್ ಪತ್ರಿಕೆಗಳು, ಮಾಧ್ಯಮಗಳು, ಜಾಹಿರಾತುದಾರರು, ಪ್ರಾಯೋಜಕರು ಇಂಥ 'ತಿನ್ನುವ ವ್ಯಾಧಿ'ಗಳ ಬಗ್ಗೆ ಸದ್ದಿಲ್ಲದೆ ಉಳಿಯುತ್ತಾರೆ. ಕಿರೀಟ ಗೆದ್ದ ಸೌಂದರ್ಯ ರಾಣಿಯರೂ, ರೂಪದರ್ಶಿಗಳು ಈ ವಿಷಯದಲ್ಲಿ ತುಟಿ ಪಿಟ್ಟೆನ್ನದೆ ಕುಳಿತಿದ್ದಾರೆ. ಹಾಗೆಂದೇ ಈ ರೋಗಗಳು ರಹಸ್ಯವಾಗಿ ಉಳಿದು, ರಹಸ್ಯವಾಗಿಯೇ ತಮ್ಮ ಬಲಿ ತೆಗೆದುಕೊಳ್ಳುತ್ತವೆ. ಬಾರ್ಬರಾ ನಿವೆನ್ ಎಂಬ ನಟಿ ಸಾರ್ವಜನಿಕವಾಗಿ ತಾನು ಬುಲಿಮಿಯಾದರಿಂದ ಪೀಡಿತಳಾದದ್ದನ್ನು ಹೇಳಿ 'ಬುಲಿಮಿಯಾ ಗುಪ್ತವಾಗಿ ಉಳಿದಿರುವ ರೋಗ. ಇಂಥ ರೋಗವಿದೆ ಎಂದು ಮೊದಲು ಗುರಿತಿಸಬೇಕು, ಅದರ ಬಗ್ಗೆ ಮಾತನಾಡಬೇಕು' ಎನ್ನುತ್ತಾರೆ. ಮತ್ತೊಬ್ಬ ನಟಿ ಎಲಿಸಾ ಡೊನೊವನ್ 'ಎರಡು ವರ್ಷಗಳ ಕಾಲ ನನ್ನ ದೈನಂದಿಕ ಆಹಾರ ಕೇವಲ ಕಾಫಿ, ನೀರು ಮತ್ತು ಕೆಲವು ದ್ರಾಕ್ಷಿ ಮಾತ್ರವಾಗಿತ್ತು' ಎಂದಿದ್ದಾಳೆ. 'ನನ್ನ ಆಪ್ತರು ನೀನು ಸತ್ತೇ ಹೋಗುತ್ತೀಯ. ನಿನ್ನನ್ನು ನೋಡಲಾಗುತ್ತಿಲ್ಲ ಎಂದರೆ, ಗ್ಲಾಮರ್ ಉದ್ಯಮದ ಜನ ಓಹ್ ನೀನು ಕ್ಯಾಮರಾದಲ್ಲಿ ಅದೆಷ್ಟು ಚೆನ್ನ ಕಾಣುತ್ತೀಯ ಎಂದು ಹುರಿದುಂಬಿಸುತ್ತಿದ್ದರು' ಎಂದಿದ್ದಾಳೆ.

ಇಂದು ಇಷ್ಟೆಲ್ಲ ಗ್ಲಾಮರ್ ಹಿಂದೆ ಮಹಿಳೆಯರ ಆರೋಗ್ಯ ಎತ್ತ ಸಾಗಿದೆ ಎಂದು ಯಾರ ಗಮನವೂ ಹರಿದಂತಿಲ್ಲ. ನಮ್ಮಲ್ಲಿಯೂ ಸಮಸ್ಯೆ ಅರ್ಜೆಂಟೈನಾದಷ್ಟೇ ದೊಡ್ಡದಾಗುವವರೆಗೂ ನಿದ್ದೆ ಮಾಡುತ್ತೇವೆ. ಸೌಂದರ್ಯ ಸ್ಪರ್ಧೆಗಳು ಗ್ಲಾಮರ್ ಜಗತ್ತಿಗೆ, ಬಾಲಿವುಡ್, ಹಾಲಿವುಡ್‌ಗೆ ಬಾಗಿಲು ತೆರೆಯುತ್ತವೆ. ಹಣ ಗ್ಲಾಮರಿನ ಆಸೆಗೆ ಎಳೆಯ ಹುಡುಗಿಯರು ಸಣ್ಣಗಾಗಿ ಜೀವ ಕಳೆದುಕೊಳ್ಳಲೂ ಸಿದ್ಧ. ಆರೋಗ್ಯಕರವಾಗಿ ಮೈ ಕೈ ತುಂಬಿಕೊಂಡು 'ನಾ ಇರುವುದೇ ಹೀಗೆ' ಎಂದು ಹೇಳಲು ಧೈರ್ಯ, ಆತ್ಮವಿಶ್ವಾಸ ಎರಡೂ ಬೇಕು. ಸೌಂದರ್ಯ ಸ್ಪರ್ಧೆಗಳ ವಿಪರೀತದ ಅಬ್ಬರದ ನಡುವೆ, ಆ ಧೈರ್ಯ ಆತ್ಮವಿಶ್ವಾಸವನ್ನು ನಮ್ಮ ಹೆಣ್ಣು ಮಕ್ಕಳಲ್ಲಿ ತುಂಬುವ ಸಣ್ಣ ಪ್ರಯತ್ನ ಸ್ತ್ರೀ ಸಂಘಟನೆಗಳದು.

ವೇಶ್ಯಾ ವೃತ್ತಿಗಿಳಿದ ಗೃಹಿಣಿಯರು

'ಫ್ರೀಡಮ್ ಫೌಂಡೇಷನ್' ಅಂಕಿಸಂಖ್ಯೆಗಳ ಪ್ರಕಾರ 1996ರಿಂದ 2000ದ ಅವಧಿಯಲ್ಲಿ ರಿಜಿಸ್ಟರ್ ಆದ 612 ಎಚ್. ಐ. ವಿ. ಪಾಸಿಟಿವ್ ಕೇಸುಗಳಲ್ಲಿ, 292 ವೇಶ್ಯೆಯರಿದ್ದರು. ಇವರಲ್ಲಿ ಬಹಳಷ್ಟು ಜನ ಗೃಹಿಣಿಯರು ಎಂಬುದೇ ಆಘಾತದ ವಿಷಯ. ಒಂದೆಡೆ ಹೊರಸಂಬಂಧಗಳನ್ನು ಇಟ್ಟುಕೊಂಡ ಪತಿಗೆ ಮನೆಯಲ್ಲಿ 'ಕಾಂಡಾಮ್' ಧರಿಸಿ ಎಂದು ಕಡ್ಡಾಯ ಮಾಡುವ ಶಕ್ತಿಯಿಲ್ಲದ ಗೃಹಿಣಿಯರು ಗಂಡನಿಂದ ಏಡ್ಸ್ ಪಡೆಯುತ್ತಿದ್ದರೆ, ಇನ್ನೊಂದೆಡೆ ಹಣಕ್ಕಾಗಿ 'ಪಾರ್ಟ್ ಟೈಮ್ ವೇಶ್ಯಾವೃತ್ತಿ' ಗಿಳಿದು ಏಡ್ಸ್ ಹೊತ್ತು ತರುತ್ತಿರುವ ಗೃಹಿಣಿಯರಿದ್ದಾರೆ. ಕೆಲವೆಡೆ ವರದಕ್ಷಿಣೆಯ ಅಬ್ಬರ ಎಷ್ಟಿದೆ ಎಂದರೆ, ಹೆಣ್ಣು ಮಕ್ಕಳು ತಮ್ಮ ಮದುವೆಗೆ ವರದಕ್ಷಿಣೆ ಗಳಿಸಲು ವೇಶ್ಯೆವೃತ್ತಿಗೆ ಇಳಿದು ಹಣ ಸಂಪಾದಿಸಿ ಮದುವೆಯಾದ ನಿದರ್ಶನಗಳಿವೆ. 1997ರಿಂದ 2000 ನಡುವೆ ಬಂಧಿಸಿದ ವೇಶ್ಯೆಯರಲ್ಲಿ ಶೇಕಡಾ 60ರಷ್ಟು ಗೃಹಿಣಿಯರು' ಎನ್ನುತ್ತಾರೆ ಸಮಾಜಸೇವಕಿ ಡಾ. ಸುಜಾತ. ಗಂಡ ಸಂಸಾರ ತೂಗಿಸಲು ಹಣ ತಾರದಾಗ ಅನಿವಾರ್ಯವಾಗಿ ತಾವು ಈ ವೃತ್ತಿಗೆ ಇಳಿದೆವೆಂದು ಹೇಳಿದವರಿದ್ದಾರೆ. ಬಡತನದ ಹಿನ್ನೆಲೆಯಲ್ಲಿ ಹೊಟ್ಟೆಪಾಡಿನ ಅನಿವಾರ್ಯಕ್ಕೆ ಇಳಿಯಿಂದ ಈ ವೃತ್ತಿಗಿಳಿದ 'ಹೈಕ್ಲಾಸ್'ಮಹಿಳೆಯರ ಸಂಖ್ಯೆಯೇನು ಕಡಮೆ ಇಲ್ಲ. ಒಂದೆಡೆ ವರದಕ್ಷಿಣೆಯ ಪಿಡುಗನ್ನೂ ಬಡಿಯಬೇಕು, ಇನ್ನೊಂದೆಡೆ ಹೆಣ್ಣಿಗೆ ವಿದ್ಯೆ, ವೃತ್ತಿಶಿಕ್ಷಣ, ಸ್ವಾವಲಂಬನೆಯ ಅಗತ್ಯವನ್ನೂ ಒತ್ತಿ ಹೇಳಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ವಿಪರೀತದ ಆಮಿಷಗಳ ಕೊಳ್ಳುಬಾಕ ಸಮಾಜದಲ್ಲಿ ಸುಲಭ ಹಣದ ಗೀಳನ್ನು ತೊಡೆಯುವುದ್ಹೇಗೆ, ಸರಳ ಬದುಕಿನ ಪಾಠವನ್ನು ಕಲಿಸುವುದ್ಹೇಗೆ, ನಿರ್ಮಲ ಬದುಕಿನ ಮೌಲ್ಯಗಳನ್ನು ಸ್ಥಾಪಿಸುವುದ್ಹೇಗೆ, ಆರೋಗ್ಯವಂತ ಸಮಾಜಕ್ಕೆ ಬುನಾದಿಯನ್ನು ಹಾಕುವುದ್ಹೇಗೆ?

ಅರ್ಧ ಲೋಕಸಭೆ ಮಹಿಳೆಯರಿಗಿರಬೇಕು

ರಾಜಕೀಯ ಪಕ್ಷ ಯಾವುದೇ ಇರಲಿ, ಅದು ಸರ್ಕಾರವನ್ನು ರಚಿಸುವಂತಾದರೆ, ಎಲ್ಲ ನಿರ್ಣಯಗಳನ್ನು ಸಂವಿಧಾನದ ಚೌಕಟ್ಟಿನಲ್ಲಿಯೇ ತೆಗೆದುಕೊಳ್ಳಬೇಕಾಗುತ್ತದೆ. ಪುರುಷ, ಮಹಿಳೆ ಎಲ್ಲರಿಗೂ ಸಮಾನ ಹಕ್ಕು ಎಂದು ಸಂವಿಧಾನವೇ ಮಾರ್ಗದರ್ಶನ ಮಾಡುತ್ತದೆ. ಲಿಂಗಭೇದದ ಆಧಾರದ ಮೇಲೆ ಯಾವ ನಿರ್ಣಯವೂ ಸಾಧ್ಯವಿಲ್ಲವೆಂಬುದು ಅನೇಕ ಮೊಕದ್ದಮೆಗಳಲ್ಲಿ ಸಾಬೀತಾಗಿದೆ. ಆದರೆ ದೈನಂದಿನ ಜೀವನದಲ್ಲಿ ಹೆಚ್ಚು ಶ್ರಮಪಟ್ಟು ಮುನ್ನಡೆಯುವವರು, ಮುನ್ನಡೆಸುವವರು ಯಾರು ಎಂದಾಗ 'ಮಹಿಳೆ' ಎಂದು ಥಟ್ಟನೆ ಹೊಳೆಯುವುದು ಸಹಜ ! ಪುರುಷ ಮನೆಯ ಹೊಸ್ತಿಲ ಹೊರಗೆ ಹೋಗಿ ದುಡಿಯಬೇಕು, ಸಂಪಾದನೆ ಮಾಡಬೇಕು. ಹೀಗಾದಾಗಲೇ ಮಹಿಳೆ ಮನೆಯಲ್ಲಿಯೇ ಇದ್ದು ಎಲ್ಲ ಕೆಲಸಗಳನ್ನು ಮಾಡಬೇಕು. ಇವೆಲ್ಲ ಹಳೆಯ ಕಾಲದ ಮಾತುಗಳು. ಈಗಿನ ಮಹಿಳೆ ಪುರುಷರಿಗೂ ಮೀರಿ ಕೆಲಸ ಮಾಡುತ್ತಾಳೆ. ಅನೇಕ ಸಲ ಪುರುಷನಿಗೆ ಮೀರಿದ ಕೆಲಸಗಳನ್ನು ಮಾಡುತ್ತಾಳೆ. ಗ್ರಾಮೀಣ ಬದುಕಿನಲ್ಲಿ ಮಹಿಳೆ ಮನೆಯ ನಾಲ್ಕು ಗೋಡೆಗಳ ಮಧ್ಯೆ ಕೆಲಸ ಮಾಡುತ್ತಾಳೆ. ಮನೆಯಲ್ಲಿ ಒಬ್ಬಿಬ್ಬರು ಮಕ್ಕಳಿದ್ದರಂತೂ ಮಹಿಳೆಗೆ ಸಮಯ ಸರಿದದ್ದೇ ಗೊತ್ತಾಗುವುದಿಲ್ಲ. ರಾತ್ರಿ-ಹಗಲುಗಳು ಬಹು ಬೇಗನೆ ಸರಿದು ಹೋಗುತ್ತದೆ. ಅಷ್ಟೇ ಏನು, ವರುಷಗಳು ಉರುಳಿದ್ದೇ ಗೊತ್ತಾಗುವುದಿಲ್ಲ. ಇಷ್ಟಾದರೂ ಮಹಿಳೆಗೆ ಯಾವ ತರಹದ ಔಪಚಾರಿಕ ಮಾನ್ಯತೆ ಸಿಗುವುದಿಲ್ಲ. ಅವಳ ಕೆಲಸವೇ ಅದು ಎಂದು ಹೊಗಳುವವರೂ ಇದ್ದರೆ ಪಟ್ಟಣದ ಜೀವನವಾದರೆ ಗಂಡ-ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗಬೇಕು- ಮನೆಯ ಖರ್ಚನ್ನೂ ತೂಗಿಸಿಕೊಂಡು ಹೋಗುವ ಉದ್ದೇಶದಿಂದ ಮನೆಗೆ ಬಂದ ಮೇಲೆ ಮಹಿಳೆ ಅಡಿಗೆ ಮನೆ ಸೇರಬೇಕು; ಮಕ್ಕಳನ್ನೂ ನೋಡುವ ರೀತಿಯಲ್ಲಿಯೇ ಗಂಡನನ್ನು ನೋಡಿಕೊಳ್ಳಬೇಕು. ಒಬ್ಬ ಮಹಿಳೆ ದಿನದ 24 ಗಂಟೆಗಳಲ್ಲಿ 16 ಗಂಟೆಗಳಿಗೂ ಮೀರಿ ಕೆಲಸ ಮಾಡುತ್ತಾಳೆಂದರೆ ಯಾವ ಸಹೃದಯಿಯೂ ಆಶ್ಚರ್ಯ ಪಡುವುದಿಲ್ಲ .ಬಹುಷ:

ಇಂಥ ಪರಿಸ್ಥಿತಿ ಭಾರತದಲ್ಲಿಯೇ ಏನು, ಉಳಿದ ಅನೇಕ ಅಭಿವೃದ್ಧಿಶೀಲ ಅಥವಾ ಬಡ ದೇಶಗಳಲ್ಲಿ ನೋಡ ಸಿಗುತ್ತದೆ. 1998 ರಲ್ಲಿ ಸಂಯುಕ್ತ ರಾಷ್ಟ್ರ ಸಂಘ ಮಾನವ ವಿಕಾಸ ವರದಿ ಪ್ರಕಟವಾಯಿತಷ್ಟೇ! ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆ -ಪುರುಷ ಇವರು ಪಡುವ ಶ್ರಮದಲ್ಲಿ ಬಹಳ ವ್ಯತ್ಯಾಸವಿದೆ. ಔದ್ಯೋಗಿಕವಾಗಿ ಮುಂದುವರಿದ ದೇಶಗಳಲ್ಲಿ ಈ ವ್ಯತ್ಯಾಸ ಸಂಕುಚಿತವಾಗುತ್ತಿದೆ ಎಂದು ವರದಿ ತಿಳಿಸುತ್ತದೆ. ಒಂದು ಅಚ್ಚರಿ ಪಡಬೇಕಾದ ವಿಷಯವೆಂದರೆ, ತಾಂಜಾನಿಯದಂಥ ದೇಶದಲ್ಲಿ ಸಶಕ್ತ ಮಹಿಳೆ ಒಬ್ಬ ಪುರುಷನಿಗಿಂತಲೂ ಎಂಟು ಪಟ್ಟು ಹೆಚ್ಚು ಶ್ರಮ ವಹಿಸುತ್ತಾಳೆ; ಪುರುಷನಿಗಿಂತಲೂ ನಾಲ್ಕು ಪಟ್ಟು ಹೆಚ್ಚು ನಡೆಯುತ್ತಾಳೆ. ಅತ್ಯಂತ ಮುಂದುವರಿದ ದೇಶಗಳಲ್ಲಿ ಸಹ ಮಹಿಳೆ ಹೆಚ್ಚು ಸಮಯ ಕೆಲಸ ಮಾಡುತ್ತಾಳೆ. ಎಂಬುದನ್ನು ಉದಾಹರಣೆಗಳ ಮೂಲಕ ತಿಳಿಸಬಹುದು. ಒಂದು ನಿಶ್ಚಿತವಾದ ಅವಧಿಯಲ್ಲಿ ಒಬ್ಬ ಮನುಷ್ಯ ಒಂದು ನೂರು ಗಂಟೆಗಳ ಕಾಲ ಕೆಲಸ ಮಾಡಿದರೆ ಅಮೇರಿಕದಲ್ಲಿ ಇದೇ ಅವಧಿಯಲ್ಲಿ ಒಬ್ಬ ಮಹಿಳೆ 118 ಗಂಟೆಗಳ ಕಾಲ ಕೆಲಸ ಮಾಡುತ್ತಾಳೆ; ಇಟಲಿ ದೇಶದಲ್ಲಿ 130 ಗಂಟೆಗಳ ಕಾಲ; ಗ್ರಾಮೀಣ ಫಿಲಿಪೈನ್‌ನಲ್ಲಿ ಆ ಅವಧಿ 122 ಗಂಟೆಗಳದ್ದು; ಗ್ರಾಮೀಣ ಕೀನ್ಯ-140 ಗಂಟೆ; ಗ್ರಾಮೀಣ ಗೌಟೆಮಾಲ-180 ಗಂಟೆ; ಗ್ರಾಮೀಣ ಇಂಡೋನೇಶಿಯ-108 ಗಂಟೆ; ಫ್ರಾನ್ಸ್-111 ಗಂಟೆ ಇತ್ಯಾದಿ. ಟಾಂಜಾನಿಯದಲ್ಲಿ ಪುರುಷರು 402 ಗಂಟೆಗಳ ಕಾಲ ಕೆಲಸ ಮಾಡಿದರೆ ಮಹಿಳೆಯರು ಅದೇ ಅವಧಿಯಲ್ಲಿ ಮಹಿಳೆಯರು 1842 ಗಂಟೆಗಳ ಕಾಲ ಕೆಲಸ ಮಾಡುವರು. ಇಂಥ ಒಂದು ಹಿನ್ನೆಲೆಯಲ್ಲಿಯೂ ಮಹಿಳೆ ಹೆಚ್ಚು ಕಡಿಮೆ ಮೊದಲಿನಿಂದಲೇ ಇದ್ದಾಳೆ. ಹೇಳಿಕೊಳ್ಳುವಂಥ ಯಾವ ಮಾನ್ಯತೆಯೂ ಸಿಕ್ಕಿಲ್ಲ. ಬಹುಷಃ ಇದೇ ಪರಿಸ್ಥಿತಿ ಶತ-ಶತಮಾನಗಳವರೆಗೂ ಮುಂದುವರಿಯಬಹುದೆಂಬ ಏಕಮೇವ ಭಾವನೆಯಿಂದ ಲೋಕಸಭೆಯಲ್ಲಿ ಮೂರನೆಯ ಒಂದು ಭಾಗ ಮಹಿಳೆಯರಿಗೇ ಮೀಸಲಾಗಿರಬೇಕೆಂಬ ಬೇಡಿಕೆ ಬಹಳ ನ್ಯಾಯಬದ್ಧವಾಗಿದೆ; ಹಾಗೆ ನೋಡಿದರೆ ಅರ್ಧ. ಲೋಕಸಭೆ ಮಹಿಳೆಯರಿಗೇ ಮೀಸಲಾಗಿರಬೇಕಿತ್ತು. ಆ ದಿನವೂ ಬಹಳ ದೂರಿದ್ದಂತೆ ಕಾಣುವುದಿಲ್ಲ. ಮಹಿಳೆಯರಿಗೆ ಆಗುತ್ತಿರುವ ಅನ್ಯಾಯದ ಹಿನ್ನೆಲೆಯಲ್ಲಿ ಇದೂ ಒಂದು ಅಧಿಕಾರ ವಿಕೇಂದ್ರಿಕರಣದ ಪ್ರಯೋಗವೆಂದು ತಿಳಿದು ಪುರುಷರು ಹೃದಯವೈಶಾಲ್ಯವನ್ನು ತೋರಿಸಬೇಕು.

- ನಾರಾಯಣ ಮಹಿಷಿ.

ಹಾರಿದವರು ಹುಡುಗಿಯರು

ಮತ್ತೆ 'ಬಂಗೀ ಜಂಪೀನ್' ಬೆಂಗಳೂರಿಗೆ ಬಂದಿತು.
ಕಾಲಿಗೆ ಹಗ್ಗ ಕಟ್ಟಿಕೊಂಡು,120 ಅಡಿಗಳ ಎತ್ತರದಿಂದ
ಧುಮುಕುವ ಸಾಹಸ ಇದು. ಬಹಳಷ್ಟು ಜನ ಗಂಡಸರು ತುತ್ತ
ತುದಿಗೆ ಬಂದು 'ಹಾರಲೋ ಬೇಡವೋ' ಎಂದು
ಓಲಾಡಿ, ಕಡೇ ಗಳಿಗೆಯಲ್ಲಿ ಮನಸ್ಸು ಬದಲಿಸಿ ಸರಿದರೆ,
ಹುಡುಗಿಯರು ದಿಟ್ಟೆದೆಯಲ್ಲಿ ಹಾರಿ ಜಿಗಿದರು.
'ಗಂಡಸರಿಗೆ ಎಂಟೆದೆ, ಹೆಂಗಸರು ಬರೀ ಪುಕ್ಕಲು'
ಅನ್ನೋರಾಮಾತು ಈಗಲೂ ನಂಬುತ್ತೀರಾ?

ಮಹಿಳಾ ಸಂಸತ್ ಸದಸ್ಯೆಯರಿಗೊಂದು ಜಾಗೃತಿ ಸಭೆ

- ಹೇಮಲತಾ ಮಹಿಷಿ

ಇತ್ತೀಚೆಗೆ ಕೇಂದ್ರ ಸಂಸದೀಯ ಸಮಿತಿಯೊಂದು ಬೆಂಗಳೂರಿಗೆ ಭೇಟಿಕೊಟ್ಟಿತ್ತು. ಹಿರಿಯ ರಾಜಕಾರಣಿ ಹಾಗೂ ಸಂಸತ್ ಸದಸ್ಯರಾದ ಶ್ರೀಮತಿ ಮಾರ್ಗರೇಟ್ ಆಳ್ವ ಅವರ ಅಧ್ಯಕ್ಷತೆಯ ಈ ಸಮಿತಿಯಲ್ಲಿ 17 ಜನ ಸಂಸತ್ ಸದಸ್ಯರಿದ್ದು ಒಬ್ಬ ಪುರುಷರನ್ನುಳಿದು ಉಳಿದವರೆಲ್ಲಾ ಮಹಿಳೆಯರೇ ಆಗಿದ್ದರು ಎನ್ನುವುದು ಈ ಸಮಿತಿಯ ವಿಶೇಷತೆ. ದಿ. 6-7-2000 ದಂದು ಬೆಳಿಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ಈ ಸಮಿತಿಯು ಹೋಟೆಲ್ ಅಶೋಕಾದ ಬ್ಯಾಂಕ್ವೆಟ್ ಹಾಲಿನಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಶಿಕ್ಷಣ ಹಾಗೂ ತರಬೇತಿ ವಿಷಯವಾಗಿ ಚರ್ಚೆ ನಡೆಸಿತು. ಸ್ವಯಂ ಸೇವಾಸಂಸ್ಥೆ ಹಾಗೂ ಶಿಕ್ಷಣ ತಜ್ಞರೊಂದಿಗೆ ಚರ್ಚೆ ಎಂದು ಸಭೆ ಏರ್ಪಡಿಸಲಾಗಿದ್ದರೂ ಅದರಲ್ಲಿ ಭಾಗವಹಿಸಿದ್ದವರು ಹೆಚ್ಚಿನವರು ಸರ್ಕಾರಿ ಅಧಿಕಾರಿಗಳೇ ಆಗಿದ್ದರು. ನನ್ನನ್ನು ಒಳಗೊಂಡಂತೆ 8-10 ಆಹ್ವಾನಿತ ಮಹಿಳೆಯರು ಅಧಿಕಾರೇತರರಾಗಿದ್ದರೆಂದು ಹೇಳಬಹುದು. ಬಹುಶಃ ಕರ್ನಾಟಕದಿಂದ ಕಳುಹಿಸಿದ್ದ ವರದಿಗಳ ಆಧಾರದ ಮೇಲೆ ಸಮಿತಿಯ ಸದಸ್ಯರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಮೇಲೆ ಒಂದೇ ಸಮನೆ ಪ್ರಶ್ನೆಗಳ ಮಳೆ ಕರೆಯತೊಡಗಿದ್ದರು. ಅದನ್ನು ಧೈರ್ಯದಿಂದ ಎದುರಿಸಿ, ಸಾಧ್ಯವಿದ್ದಷ್ಟು ಸಮಜಾಯಿಸಿ ಕೊಡಲು, ತಮ್ಮ ಸರ್ಕಾರವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದವರು ಕಾರ್ಯದರ್ಶಿ ಶ್ರೀಮತಿ ಮೀರಾ ಸಕ್ಸೇನಾ ಅವರು. ಸಭೆಯ ಹೆಚ್ಚಿನ ಸಮಯವನ್ನೆಲ್ಲಾ ಬಹುಶಃ ಅವರೇ ತೆಗೆದುಕೊಂಡರು, ಸರ್ಕಾರಿ ಅಂಕಿ-ಅಂಶಗಳನ್ನು ಕೊಡುವುದರಲ್ಲಿ. ಆಹ್ವಾನಿತರಿಗೆ ಚರ್ಚೆಯಲ್ಲಿ ಹೆಚ್ಚಿನ ಅವಕಾಶವೇ ಇಲ್ಲ. ಹಾಗಾಗಿ ನಾನೇ ಒಂದೆರಡು ಬಾರಿ ಗೂಂಡಾಗಿರಿ ಮಾಡಿ, ಸರ್ಕಾರಿ ವರದಿಯ ನಡುವೆ ಮೂಗು ತೂರಿಸಿ ನಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಬೇಕಾಯಿತು, ಸರ್ಕಾರಿ ಹೇಳಿಕೆಯನ್ನು ವಿರೋಧಿಸಬೇಕಾಯಿತು.

ತಮ್ಮದೇ ಪಕ್ಷದ ಅಧಿಕಾರವಿರುವ ಕರ್ನಾಟಕ ರಾಜ್ಯದಲ್ಲಿ ಈವರೆಗೆ ರಾಜ್ಯ ಮಹಿಳಾ ಆಯೋಗದ ಮಹಿಳಾ ಅಭಿವೃದ್ಧಿ ನಿಗಮದ, ಮತ್ತಿತರ ಮಹಿಳಾ ಸಮಿತಿಗಳ ಪುನರ್‌ರಚನೆ ಈವರೆಗೆ ಆಗಿಲ್ಲ ಎಂಬುದರ ಬಗ್ಗೆ ಶ್ರೀಮತಿ ಮಾರ್ಗರೇಟ್ ಆಳ್ವ ಆರಂಭದಲ್ಲಿಯೇ ಅಸಮಾಧಾನ ವ್ಯಕ್ತಪಡಿಸಿದ್ದುದು ಅವರ ಮಹಿಳಾಪರ ಕಾಳಜಿಯನ್ನಲ್ಲದೇ ಮುತ್ಸದ್ದಿತನವನ್ನು ತೋರಿಸಿತು. ಎಷ್ಟೇ ಆದರೂ ರಾಜಕಾರಣದಲ್ಲಿ ಅವರು ಹಳೇ ಹುಲಿ.

ಚರ್ಚೆಯಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಅನೇಕ ವಿಷಯಗಳು ಹಾದು ಹೋದವು. ಸಮಿತಿಯ ಒಬ್ಬೊಬ್ಬ ಸದಸ್ಯರು ತಮಗೆ ಬೇಕಾದ ವಿಷಯಗಳ ಬಗ್ಗೆ ಪ್ರಶ್ನಿಸಿ ಉತ್ತರ ಪಡೆದರು. ಮಹಿಳಾ ಅಭಿವೃದ್ಧಿ ನಿಗಮದ ಕಾರ್ಯಗಳ ಬಗ್ಗೆ ಚರ್ಚೆ ನಡೆದಾಗ ಪ್ರಸ್ತಾಪಿಸಲ್ಪಟ್ಟ ಮುಖ್ಯ ವಿಷಯ ದೇವದಾಸಿಯರ ಪುನರ್ವಸತಿ ಯೋಜನೆ. ಮಧ್ಯಪ್ರದೇಶ, ಉತ್ತರ ಪ್ರದೇಶ, ರಾಜಾಸ್ತಾನದ ಮಹಿಳಾಸಂಸತ್ ಸದಸ್ಯರಿಗೆ ದೇವದಾಸಿ ಪದ್ಧತಿಯ ಬಗ್ಗೆ ಇದ್ದ ಅಜ್ಞಾನ ಈ ಸಂದರ್ಭದಲ್ಲಿ ಬೆಳಕಿಗೆ ಬಂದಿತು. 1991 ರಿಂದ ದೇವದಾಸಿಯರನ್ನು ದೇವರಿಗೆ ಅರ್ಪಿಸಿದ ಒಂದೂ ಘಟನೆ ವರದಿಯಾಗಿಲ್ಲ ಎಂದು ಸರ್ಕಾರಿ ವಕ್ತಾರರು ತಿಳಿಸಿದಾಗ ಮಾರ್ಗರೇಟ್ ಆಳ್ವಾಗೆ ಕಾಣಿಸುವಂತೆ ಜೋರಾಗಿ ಅಡ್ಡಡ್ಡ ತಲೆ ಅಲ್ಲಾಡಿಸಿ ಅದಕ್ಕೆ ವಿರೋಧ ಸೂಚಿಸಬೇಕಾಯಿತು. ಹಾಗಾಗಿ ವಿವರಣೆ ಕೊಟ್ಟಾಗ, ಸವದತ್ತಿ ಎಲ್ಲಮ್ಮನ ದೇವಾಲಯದಲ್ಲಿ ದೇವಾದಾಸಿಯರನ್ನಾಗಿ ಮಾಡಲು ಈಗ ಅವಕಾಶವಿಲ್ಲ. ಆದರೆ ಸುತ್ತ-ಮುತ್ತಲ ಹಳ್ಳಿಗಳ ಮನೆಗಳಲ್ಲಿ ಆ ಕೆಲಸದ ನಡೆಯುತ್ತಿದೆ ಎನ್ನುವುದು ಹೊರಬಂತು. ಕೆಲವೊಂದು ವಿವರಗಳು ಕುತೂಹಲಕಾರಿಯಾಗಿದ್ದವು. ದೇವದಾಸಿಯರಲ್ಲಿ 96-97% ಪರಿಶಿಷ್ಟ ಜಾರಿಗೆ ಸೇರಿದ ಮಹಿಳೆಯರು ! ಬೆಳಗಾಂನ ಅಥವಾ ಹಾಗೂ ಸವದತ್ತಿಯಲ್ಲಿ ಪುನರ್ವಸತಿ ಯೋಜನಾ ಕೇಂದ್ರಗಳಿವೆ. ಇಲ್ಲಿ ದೇವದಾಸಿಯರಿಗೆ ಬುಟ್ಟಿ ಹೆಣ್ಣೆಯುವುದು, ಚಾಕ್‌ಪೀಸ್ ಮಾಡುವುದು ಇತ್ಯಾದಿ ವೃತ್ತಿಗಳನ್ನು ಕಲಿಸಿ, ವರಮಾನ ಗಳಿಸುವ ತರಬೇತಿ ನೀಡಲಾಗುತ್ತದೆ. ಅವರಿಗಾಗಿ ಆರೋಗ್ಯ ತಪಾಸಣ ಶಿಬಿರಗಳು ಜ್ಯಾಗತಿ ಶಿಬಿರಗಳನ್ನು ನಡೆಸಲಾಗುತ್ತದೆ. ಸುಮಾರು 1 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ದೇವದಾಸಿಯರ ಪುನರ್ವಸತಿಗಾಗಿ ರಾಜ್ಯಸರ್ಕಾರ ವಿನಿಯೋಗಿಸುತ್ತದೆ, ಅದರಲ್ಲೂ ಸ್ವಾಯತ್ತಸಂಸ್ಥೆಗಳ ಮೂಲಕ ಆ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ದೇವದಾಸಿಯರ ಹೆಣ್ಣುಮಕ್ಕಳಿಗಾಗಿ ಸವದತ್ತಿಯಲ್ಲಿ ಮಕ್ಕಳ ಸದನವನ್ನು ತೆರೆಯಲಾಗಿದೆ. ಆರಂಭದಲ್ಲಿ ದೇವದಾಸಿಯರಿಂದ ಸಾಕಷ್ಟು ಒಳ್ಳೆಯ ಪ್ರತಿಕ್ರಿಯೆ ಬರದಿದ್ದರೂ, ಮುಂದೆ ಹಳೆಯ ವಯಸ್ಸಾದ ದೇವದಾಸಿಯರನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡು ಅವರ ಮೂಲಕ ಅವರ ಕರುಣಾಜನಕ ಬಾಳಿನ ಸತ್ಯಕತೆಗಳ ಮೂಲಕ ಅವರನ್ನು ತಲುಪುವ ಪ್ರಯತ್ನಿಸಿದಾಗ ತೀವ್ರ ಪರಿಣಾಮ

ಉಂಟಾಯಿತು. ಉತ್ತಮ ಪ್ರತಿಕ್ರಿಯೆ ಲಭಿಸಿತು ಎಂದು ತಿಳಿದಾಗ, ನಮ್ಮ ಗ್ರಾಮೀಣ ಮಹಿಳೆಯರನ್ನು ತಲುಪುವ ಮಾರ್ಗ ಯಾವುದು ಎಂಬುದು ಸ್ಪಷ್ಟವಾಗುತ್ತದೆ. ಯಾವತ್ತು ಅನುಭವದ ಕಥನಗಳು ವೇದಿಕೆಯ ಮೇಲಿನ ಭಾಷಣಗಳಿಗಿಂತ ಹೆಚ್ಚು ಪರಿಣಾಮಕಾರಿ. ಇದೇ ಕಾರ್ಯತಂತ್ರವನ್ನು ಪಂಚಾಯತ್ ಚುನಾವಣೆಗಳಲ್ಲಿ ಗೆದ್ದುಬಂದ ಮಹಿಳಾ ಪ್ರತಿನಿಧಿಗಳ ತರಬೇತಿಗೂ ಬಳಸಲಾಗುತ್ತದೆ. ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಗ್ರಾಮೀಣ ಮಹಿಳೆಯರ ಸಭೆಯಲ್ಲಿ ಗ್ರಾಮೀಣ ಮಹಿಳೆಯೊಬ್ಬಳು ತನ್ನ ಕುಡುಕ ಗಂಡನ ಹಿಂಸೆಯಿಂದ ಪಾರಾಗಿ, ತಾನೇ ಕೆಲಸಕ್ಕೆಗೊಂಡು ಗಳಿಕೆ ಮಾಡುತ್ತಾ ಮಕ್ಕಳನ್ನು ಸಾಕುತ್ತಿರುವುದನ್ನು ತನ್ನದೇ ಆದ ಗ್ರಾಮೀಣಭಾಷೆಯಲ್ಲಿ ತಿಳಿಸಿದಾಗ ಆದ ಅದ್ಭುತ ಪರಿಣಾಮ ಗಮನಾರ್ಹ. ಸಮಿತಿಯ ಮಹಿಳಾ ಸದಸ್ಯರೊಬ್ಬರು ಸರ್ಕಾರಿ ವಕ್ತಾರರು ಅಂಕಿ-ಅಂಶಗಳನ್ನು ಕೊಡುತ್ತಿರುವಾಗ "ಅಂಕಿ-ಅಂಶಬೇಡ, ಯಾವುದಾದರೂ ಮಹಿಳೆಯರ ನಿರ್ದಿಷ್ಟ ಯಶಸ್ವಿಕತೆ' ತಿಳಿಸಿ ಎಂದು ಪದೇ-ಪದೇ ಕೇಳುತ್ತಿದ್ದುದು ಇದರಿಂದಾಗಿಯೇ ಇರಬೇಕು. ಗಂಟೆಗಟ್ಟಲೆ ಒಣಭಾಷಣಕ್ಕಿಂತ 10 ನಿಮಿಷದ ಯಶಸ್ವಿಕತೆಯ ಕಥನ, ಅದು ಆ ವ್ಯಕ್ತಿಯ ಬಾಯಿಂದ ಪರಿಣಮಕಾರಿ.

ಇದರೊಂದಿಗೆ ಸುಮಾರು 2000 ದೇವದಾಸಿಯರು ಒಂದು ಸಂಘವನ್ನು ಮಾಡಿಕೊಂಡು 16 ಲಕ್ಷರೂ.ಗಳ ಉಳಿತಾಯ ಮಾಡಿದ್ದಾರೆನ್ನುವುದು 10,000 ದೇವದಾಸಿಯರಲ್ಲಿ ಈಗಾಗಲೇ 75-80% ದೇವದಾಸಿಯರನ್ನು ಪುನರ್ವಸತಿಗೊಳಿಸಲಾಗಿದೆ ಎನ್ನುವುದು ನಿಜವಿದ್ದಲ್ಲಿ ನಿಜಕ್ಕೂ ಶ್ಲಾಘನೀಯ. ಸರ್ಕಾರಿ - ಸರ್ಕಾರೇತರರು ಒಂದು ಗೂಡಿ ಕೈಗೊಂಡಿರುವ ಈ ಯೋಜನೆಯಿಂದ ಅನಿಷ್ಟಕರ ದೇವದಾಸಿ ಪದ್ಧತಿ ನಮ್ಮ ನಾಡಿನಿಂದ ತೊಲಗಿದರೆ ಮಹಿಳೆಯರಿಗೆ ನೆಮ್ಮದಿ.

ಈಗಾಗಲೇ ಇರುವ ರಾಜ್ಯಮಹಿಳಾ ಆಯೋಗದ ಪುನರ್‌ರಚನೆಯಾಗದಿದ್ದರೂ ನಮ್ಮ ಸರ್ಕಾರ ಮತ್ತೊಂದು ಸರ್ಕಾರಿಸಂಸ್ಥೆಯನ್ನು (Women's Task Force) ಹುಟ್ಟು ಹಾಕಿದೆ. ಮಹಿಳೆಯರ ಅಭಿವೃದ್ಧಿ ಬಗ್ಗೆ ನೀತಿ ನಿರೂಪಿಸುವುದು ಇದರ ಕೆಲಸವಂತೆ ! ಇದರ ಅಧ್ಯಕ್ಷೆ ಶ್ರೀಮತಿ ಗೌರಮ್ಮ ಮೊದಲಬಾರಿಗೆ ಅವರನ್ನು ಈ ಸಭೆಯಲ್ಲಿ ನೋಡಿ ಪರಿಚಯ ಮಾಡಿಕೊಂಡೆ.

ಈವರೆಗೆ ಈ ಟಾಸ್ಕ್ ಫೋರ್ಸ್‌ನನ ಒಂದೂ ಸಭೆ ನಡೆದಿಲ್ಲ. ಅಂದ ಮೇಲೆ ಸರ್ಕಾರ ಈ ಬಗ್ಗೆ ಎಷ್ಟು ಕಾಳಜಿ ಹೊಂದಿದೆ ಎಂಬುದು ತಿಳಿದು ಬರುತ್ತದೆ. ಮಹಿಳಾ ಆಯೋಗಕ್ಕೆ ಮಾಡಿದಂತೆ ಇದಕ್ಕೂ ತನ್ನದೇ ಆದ ಕಚೇರಿ, ಸಿಬ್ಬಂದಿ, ಧನ ಸಹಾಯ ಇರುವುದಿಲ್ಲ. ಬಜೆಟ್‌ನಲ್ಲಿ ಮಂಡಿಸಿಟ್ಟ ಹಣವೂ ಕೇವಲ ಸಿಬ್ಬಂದಿಗಳ ಸಂಬಳ, ಟಿ.ಎ.,ಡಿ.ಎ. ಮತ್ತಿತರ ಖರ್ಚಾಗಳಿಗೇ ಹೋಗುತ್ತದೆ. ಏನಾದರೂ ಕೆಲಸ ಮಾಡಲು ಹಣವೇ ಉಳಿದಿರುವುದಿಲ್ಲ! ಇದು ಎಲ್ಲಾ ಸರ್ಕಾರಿ ಸಂಸ್ಥೆಗಳ ಹಣೆಬರಹ. ಇಂಥವುಗಳಿಂದ ಮಹಿಳೆಯರ ಸಮಸ್ಯೆಗಳು ಎಷ್ಟರಮಟ್ಟಿಗೆ ಬಗೆಹರಿಯಲು ಸಾಧ್ಯ ! ಮಾರ್ಗರೇಟ್ ಆಳ್ವಾರವರು ಶ್ರೀಮತಿ ಗೌರಮ್ಮನವರಿಗೆ ಆದಷ್ಟು ಬೇಗನೇ ಸಭೆ ಕರೆದು, ಮಹಿಳೆಯರ ಅಭಿವೃದ್ಧಿ ಬಗ್ಗೆ ಒಂದು ಗಡುವು ಹಾಕಿಕೊಂಡು ನೀತಿ ನಿರೂಪಿಸಬೇಕೆಂದು ಸೂಚನೆ ಕೊಟ್ಟಿದ್ದು ಕಾರ್ಯರೂಪಕ್ಕೆ ಬರುತ್ತದೆಂದು ನಂಬೋಣವೆ ?

NGO (Non Governmental Organisation) ಬಗ್ಗೆ ವಿಷಯಪ್ರಸ್ತಾಪಕ್ಕೆ ಬಂದಾಗ ಶ್ರೀಮತಿ ಮಾರ್ಗರೇಟ್ ಆಳ್ವಾ ಹಾಸ್ಯವಾಗಿ, ಮೂರು ವಿಧದNGO ಗಳಿವೆ, ಅವುಗಳೆಂದರೆ

Govt. owned NGO (GONGO)

Businessmen owned NGO (BONGO)

My own NGO (MONGO)

ಎಂದು ಹೇಳಿದಾಗ ನಗು ಉಕ್ಕಿದರೂ, ಇದು ಎಷ್ಟು ಸತ್ಯ ಎನಿಸಿತು. ಈಗ ಇರುವNGO ಗಳಲ್ಲಿ ನಿಜಕ್ಕೂ ಎಷ್ಟು ಸಂಸ್ಥೆಗಳು ಸಾಚಾ, ಎಷ್ಟು ಖೋಟಾ ಎಂಬುದೇ ತಿಳಿಯುವುದಿಲ್ಲ. ಜನರ ಸೇವೆಗಾಗಿ ಇರುವುದು ಯಾವುದು, ಹಣ ನುಂಗಲು ಇರುವುದು ಯಾವುದು, ಯಾವುದೇ ಒಳ್ಳೆಯ ಉದ್ದೇಶ ಸಾಧಿಸಲು ಇರುವುದು ಯಾವುದು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ ತಿಳಿಯಬೇಕು.

ರಾಜ್ಯ ಮಹಿಳಾ ಆಯೋಗದ ಬಗ್ಗೆ ವಿಷಯ ಪ್ರಸ್ತಾಪವಾದಾಗಲಂತೂ ತೀವ್ರ ಟೀಕೆಯನ್ನು ಸರ್ಕಾರ ಎದುರಿಸಬೇಕಾಯಿತು. ಬಂದ 369 ದೂರುಗಳಲ್ಲಿ 33ನ್ನು ಬಗೆಹರಿಸಲಾಗಿದೆ. ಉಳಿದುದನ್ನು ಆಯಾಯ ಇಲಾಖೆಗಳಿಗೆ ಕಳಿಸಲಾಗಿದೆ ಎಂದು ಆಯೋಗದ ಸಧ್ಯದ ಮೇಲ್ವಿಚಾರಣೆಯಲ್ಲಿರುವ ಅಧಿಕಾರಿಗಳು ತಿಳಿಸಿದಾಗ ಒಬ್ಬ ಮಹಿಳಾ ಸದಸ್ಯರು ಮಹಿಳಾ ಆಯೋಗವೇನು ಅಂಚೆಕಛೇರಿ ಮಾತ್ರವೇ ಎಂದು ಪ್ರಶ್ನಿಸಿದ್ದು ಮಾರ್ಮಿಕವಾಗಿತ್ತು. ಈವರೆಗೆ ಆಯೋಗ ಮೂರು ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಒಂದೂ ವರದಿ ಶಾಸನಸಭೆಯ ಮುಂದೆ ಈವರೆಗೆ ಮಂಡಿತವಾಗಿಲ್ಲ ಎನ್ನುವುದು ಬೆಳಕಿಗೆ ಬಂತು. ಮಹಿಳಾ ಆಯೋಗದ ಕಾರ್ಯಕ್ಕೆ ಪೋಲೀಸರನ್ನು ಬಳಸಿಕೊಳ್ಳಲಾಗುತ್ತದೆ, ಎನ್ನುವುದಂತೂ ಗಾಬರಿ ಹುಟ್ಟಿಸಿತು. ನಮ್ಮ ಎಲ್ಲಾ ಜೀವನದ ಸಮಸ್ಯೆಗಳಿಗೆ ಪೋಲೀಸರ ನೆರವು ಅಷ್ಟು ಅವಶ್ಯಕವೆ ? ಬೇರೆ ಬದಲಿ

ಮಾರ್ಗವೇ ಇಲ್ಲವೆ ? ಈಗ ಕೌಟುಂಬಿಕ ಸಮಸ್ಯೆಗಳೂ ಪೋಲೀಸರ ಮುಂದೆ ಹೋಗುತ್ತದೆ. ಪೋಲೀಸ್ ಠಾಣೆಗಳಲ್ಲಿ ಗಂಡ-ಹೆಂಡತಿಯರನ್ನು ಕರೆಸಿ ಪಂಚಾಯಿತಿ ಮಾಡಲಾಗುತ್ತದೆ. ಅವರಿಗೆ ತಿಳಿದ ಪರಿಹಾರ ಸೂಚಿಸಲಾಗುತ್ತದೆ, ಗಂಡನ ಕಡೆಯವರನ್ನು ಹೆದರಿಸುವ ವರದಕ್ಷಿಣೆ ದೂರನ್ನು ದಾಖಲಿಸಿಕೊಳ್ಳುವ ಬೆದರಿಕೆ ಒಡ್ಡಲಾಗುತ್ತದೆ. ಎಷ್ಟೋಬಾರಿ ಹಣವೂ ಕೈಬದಲಾಗುತ್ತದೆ. ಕಾಗದ-ಪತ್ರಗಳು ಮಾಯಾವಾಗುತ್ತವೆ. ಸುಳ್ಳು ದಾಖಲೆಗಳು ಸೃಷ್ಟಿಯಾಗುತ್ತದೆ. ಪೋಲೀಸರ ಕೈಗಳಿಗೆ ಜೀವನದ ಸೂತ್ರಗಳನ್ನು ಒಪ್ಪಿಸುವುದು ಎಷ್ಟು ಸಮಂಜಸ ? ಕೌಟುಂಬಿಕ ಸಲಹಾ ಕೇಂದ್ರಗಳು ಬಲಗೊಳ್ಳುವ ಅವಶ್ಯಕತೆಯನ್ನು ಇದು ತೋರಿಸುತ್ತದೆ.

ಸರ್ಕಾರವು ಈಗ ಖಾಲಿ ನಿವೇಶನ - ಮನೆಗಳನ್ನು ಮಂಜೂರು ಮಾಡುವಾಗ ಗಂಡ-ಹೆಂಡತಿಯರಿಬ್ಬರ ಹೆಸರಿನಲ್ಲಿ ಪಟ್ಟಾಕೊಡುತ್ತದೆ ಎನ್ನುವುದು ತಿಳಿದುಬಂದು ಸಂತೋಷವಾಯಿತು. ಕೊನೇಪಕ್ಷ ಈಗಲಾದರೂ ''ಇದು ನನ್ನ ಮನೆ, ಮನೆಬಿಟ್ಟು ಹೋಗು'' ಎಂದು ಗಂಡ ಹೆಂಡತಿಗೆ ಹೇಳಲಾರ !

ಸ್ಥಳೀಯ ಸಂಸ್ಥೆಗಳ ಮಹಿಳಾ ಸದಸ್ಯೆಯರು ಈಗಲಾದರೂ ಸ್ವತಂತ್ರವಾಗಿ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆಯೇ ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆಯೇ ಎಂಬುದು ಚರ್ಚೆಗೆ ಬಂದಾಗ, ಮಹಿಳಾ ಸದಸ್ಯೆಯರಿಗೆ ಈಗ ತರಬೇತಿ ನೀಡಲಾಗುತ್ತಿದ್ದು ಬಹಳಷ್ಟು ಸುಧಾರಣೆ ಕಂಡುಬರುತ್ತಿದೆ ಎಂದು ತಿಳಿಸಲಾಯಿತು. ಆದರೆ, ಪ್ರತಿಸಾರಿ ಮೀಸಲಾತಿ ಕ್ಷೇತ್ರಗಳನ್ನು ಬದಲಾಯಿಸುತ್ತಾ ಹೋಗುವುದರಿಂದ ಒಮ್ಮೆ ಮೀಸಲಾತಿ ಕ್ಷೇತ್ರದಿಂದ ಚುನಾಯಿತರಾದ ಮಹಿಳೆಯರು ಮುಂದಿನ ಬಾರಿ ಚುನಾವಣೆಗೆ ನಿಲ್ಲುವುದೇ ಇಲ್ಲ. ಇದರಿಂದ ಅ ತರಬೇತಿ ಪಡೆದವರು ಮನೆಯಲ್ಲಿಯೇ ಉಳಿಯುತ್ತಾರೆ ಎಂಬ ಅಂಶವನ್ನು ಗಮನಿಸಲಾಯಿತು. ಆದರೂ, ಇದರಿಂದ ಮಹಿಳೆಯರಲ್ಲಿ ರಾಜಕೀಯ ಜಾಗೃತಿಯಾದರೂ ಮೂಡುತ್ತದೆ ಎನ್ನುವುದು ನಿಜ. ಮಹಿಳಾ ಸದಸ್ಯೆಯರು ಸಕ್ರಿಯವಾಗಿ ಪಂಚಾಯಿತಿಗಳಲ್ಲಿ ಭಾಗವಹಿಸಬೇಕಾದರೆ ಅವರಿಗೆ ತರಬೇತಿ ಕೊಟ್ಟರೆ ಸಾಲದು, ಪುರುಷರಿಗೂ ಅದನ್ನು ಸ್ವೀಕರಿಸುವ ಮನೋಧರ್ಮ ಉಂಟುಮಾಡಲು ಪುರುಷಸದಸ್ಯರಿಗೂ ತರಬೇತಿ ಅಗತ್ಯ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತಪಟ್ಟಿತು.

ರಾಜ್ಯದಲ್ಲಿ 40170 ಅಂಗನವಾಡಿಗಳಿದ್ದು ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಡುವ ಸಂಬಳ, ದೊರಕುವ ಸೌಲಭ್ಯದ ಬಗ್ಗೆ ಚರ್ಚೆ ನಡೆದು, ಅವರು ಕೇಳುತ್ತಿರುವಂತೆ ನೇಮಕಾತಿಯನ್ನು ಸಕ್ರಮಗೊಳಿಸಲು ಇರುವ ಆರ್ಥಿಕತೊಂದರೆಯನ್ನು ತಿಳಿಸಲಾಯಿತು. ಅತ್ಯಂತ ಕಡಿಮೆ ಸಂಬಳ ತೆಗೆದುಕೊಳ್ಳುತ್ತಿದ್ದರೂ ನೇಮಕಾತಿ ಸಕ್ರಮಗೊಳ್ಳದ್ದರೂ ಸರ್ಕಾರದ ಎಲ್ಲಾ ಮಹಿಳಾಪರ-ಮಕ್ಕಳಪರ ಯೋಜನೆಗಳ ಅನುಷ್ಠಾನದ ಹೊಣೆಯನ್ನು ಅವರ ಮೇಲೆಯೇ ಹೊರಸಲಾಗುತ್ತಿದೆ. ಯಾವುದೇ ಹೊಸ ಯೋಜನೆ ಜಾರಿಗೆ ಬಂದರೂ ಅಂಗನವಾಡಿ ಕಾರ್ಯಕರ್ತರ ಮೇಲೆಯೇ ಅದರ ಜವಾಬ್ದಾರಿ ಹೊರಿಸಲಾಗುತ್ತದೆ. ಅದಕ್ಕೆ ಅವರ ವಿರೋಧವಿದೆ ಎನ್ನುವುದು ಚರ್ಚೆಗೆ ಬಂದಿತು.

ಸರ್ಕಾರಿ ಯೋಜನೆಗಳನ್ನು ಸ್ವಾಯತ್ತ ಸಂಸ್ಥೆಗಳು ವಹಿಸಿಕೊಂಡಾಗ ಆಗುವ ಕಿರುಕುಳಗಳು, ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ಸರಳೀಕರಿಸಬೇಕಾದ ಅವಶ್ಯಕತೆಯ ಬಗ್ಗೆ ಅಭಿಪ್ರಾಯ ವ್ಯಕ್ತಗೊಂಡಿತು. ಮಹಿಳೆಯರ ತರಬೇತಿಗಾಗಿ ಬೆಂಗಳೂರಿನಲ್ಲಿ ಒಂದು ಪ್ರಾದೇಶಿಕ ಕೇಂದ್ರ ತೆರೆಯಬೇಕಾದುದರ ಬಗ್ಗೆ ಸಂಸದರಿಂದ ಸಲಹೆ ಬಂದಿತು.

ಆಂಧ್ರದಲ್ಲಿ ಮಹಿಳೆಯರ ಆರೋಗ್ಯರಕ್ಷಣೆಗಾಗಿ ಯೋಜನೆಗಳಿದ್ದರೂ ಅವುಗಳೆಲ್ಲಾ ಹೇಗೆ ಮಹಿಳೆಯರ ಸಂತಾನೋತ್ಪತ್ತಿಯ ವಿಷಯಗಳಿಗೇ ಸಂಬಂಧಿಸಿವೆ. ಗರ್ಭಿಣಿ ಮತ್ತು ಬಾಣಂತಿಯರಾದ ಮಹಿಳೆಯರಿಗೆ ಮಾತ್ರ ಲಭ್ಯವಿದೆ, ಮಹಿಳೆಯರ ಸಾಮಾನ್ಯ ಆರೋಗ್ಯದ ಬಗ್ಗೆ ಹೇಗೆ ಯಾವ ಸರ್ಕಾರಗಳೂ ಲಕ್ಷ್ಯವಹಿಸುತ್ತಿಲ್ಲ ಎಂಬುದು ಚರ್ಚೆಯಲ್ಲಿ ಬಂದ ಅತಿ ಮಹತ್ವದ ಅಂಶ. ಮಹಿಳೆಯ ಆರೋಗ್ಯದ ಬಗ್ಗೆ ಮಾತನಾಡುವಾಗಲೆಲ್ಲಾ ಸಾಮಾನ್ಯವಾಗಿ ಅವಳ ಸಂತಾನೋತ್ಪತ್ತಿಯ ಸಂಬಂಧವಾಗಿಯೇ ಮಾತನಾಡಲಾಗುತ್ತದೆ. ಯೋಜನೆಗಳನ್ನು ರೂಪಿಸಲಾಗುತ್ತದೆ. ಅದನ್ನು ಹೊರತುಪಡಿಸಿಯೂ ಅವಳಿಗೆ ಬೇಕಾದಷ್ಟು ಆರೋಗ್ಯದ ಸಮಸ್ಯೆಗಳಿರುತ್ತವೆ ಎನ್ನುವುದು ನಿರ್ಲಕ್ಷಿಸಲಾಗುತ್ತಿದೆ. ವಿಮೆನ್ಸ್ ಟಾಸ್ಕ್ ಫೋರ್ಸ್ ಮಹಿಳೆಯರ ಸಾಮಾನ್ಯ ಆರೋಗ್ಯದ ಬಗ್ಗೆ ಹೆಚ್ಚಿನ ಲಕ್ಷ್ಯ ಹರಿಸಬೇಕೆಂದು ಸೂಚಿಸಲಾಯಿತು.

ಮಹಿಳೆಯರಿಗೆ ಸರ್ಕಾರಿ ಉದ್ಯೋಗಗಳಲ್ಲಿ 30% ಮೀಸಲಾತಿ ನಮ್ಮ ರಾಜ್ಯದಲ್ಲಿ ಕೊಡಲಾಗುತ್ತಿದೆ ಎಂದು ಹೆಮ್ಮೆಯಿಂದ ಹೇಳಿಕೊಂಡರೂ, ಪೋಲೀಸ್ ಇಲಾಖೆಯಲ್ಲಿ ಇದಕ್ಕೆ ಬಲವಾದ ವಿರೋಧವಿದೆ ಎಂಬುದು ಬೆಳಕಿಗೆ ಬಂತು.

ಸಭೆಯ ಕೊನೆಯಲ್ಲಿ ಶ್ರೀಮತಿ ಮಾರ್ಗರೇಟ್ ಆಳ್ವಾ ಕರ್ನಾಟಕದಲ್ಲಿ ಮಹಿಳೆಯರಿಗಾಗಿ ಇರುವ ಯೋಜನೆಗಳ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿ, ತಮಗೆ ಮೊದಲಬಾರಿ ಅವುಗಳ ಬಗ್ಗೆ ತಿಳಿಯಿತು, ಎಂದಿದ್ದು ಆ ಎಲ್ಲಾ ಯೋಜನೆಗಳನ್ನು ಸರಳವಾದ ಭಾಷೆಯಲ್ಲಿ ಪುಸ್ತಕರೂಪದಲ್ಲಿ ಕ್ರೋಢೀಕರಿಸಿ ಎಲ್ಲಾ ಸಂಸತ್

ಸದಸ್ಯರಿಗೆ ಕಳಿಸಬೇಕು, ಅವುಗಳು ಜನಸಾಮಾನ್ಯರಿಗೂ ತಿಳಿದು ಅವುಗಳ ಪ್ರಯೋಜನವನ್ನು ಅವರು ಪಡೆದುಕೊಳ್ಳಬೇಕು ಅವುಗಳ ಅನುಷ್ಠಾನ ಸರಿಯಾಗಿ ಆಗಬೇಕಾದರೂ ಸರ್ಕಾರದ ಎಲ್ಲಾ ಇಲಾಖೆಗಳ ನಡುವೆ, ಸರ್ಕಾರ ಜನರ ನಡುವೆ ಪರಸ್ಪರ ಸಹಕಾರವಿರಬೇಕು, ಇಲ್ಲವಾದರೆ ಎಷ್ಟೋ ಯೋಜನೆಗಳಿಗೆ ಮಂಜೂರಾದ ಹಣ ಖರ್ಚಾಗಿಯೇ ಇರುವುದಿಲ್ಲ, ಜನರಿಗೆ ಯೋಜನೆಯು ಫಲ ದೊರಕುವುದಿಲ್ಲ. ಸ್ವಾಯತ್ತ ಸಂಸ್ಥೆಗಳ ಸಹಕಾರದೊಂದಿಗೆ ಸರ್ಕಾರ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು ಎಂಬುದು ಸಮಂಜಸವಾಗಿತ್ತು.

ಒಟ್ಟಾರೆ ನಮ್ಮ ದೇಶದ ಸಂಸತ್ ಸದಸ್ಯರ ತಿಳಿವಳಿಕೆ ಈ ಚರ್ಚೆಯ ಮೂಲಕ ಖಂಡಿತಾ ಹೆಚ್ಚಿರಬೇಕು ಎನ್ನಿಸಿತು. ಈ ರೀತಿ ಎಲ್ಲಾ ರಾಜ್ಯಗಳಲ್ಲಿನ ಯೋಜನೆಗಳು, ಅನುಷ್ಠಾನದ ಬಗ್ಗೆ ವ್ಯಾಪಕ ವಿಚಾರ ವಿನಿಯೋಗ ನಡೆಸಿದ ಮಹಿಳಾ ಸಂಸತ್ ಸದಸ್ಯೆಯರು ಹೆಚ್ಚಿನ ವಿಚಾರವಂತಿಕೆ, ತಿಳಿವಳಿಕೆ, ಅನುಭವದಿಂದ ಸಂಸತ್ತಿನ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗಬಹುದು. ಸರ್ಕಾರ ಅವರ ಮೇಲೆ ಮಾಡಿದ ಹಣ ಸದುಪಯೋಗವೆಂದೆನಿಸಬಹುದು.

ಇತ್ತೀಚೆಗೆ ಪತ್ರಿಕೆಯಲ್ಲಿ ಬಂದ ವರದಿಯಂತೆ ಮತ್ತೊಂದು ಸದಸ್ಯರ ಸಮಿತಿಯ ಮೈಸೂರು ಭೇಟಿಯ ಅಂದಾಜು ವೆಚ್ಚ 3 ಕೋಟಿ ರೂಪಾಯಿಗಳು ! ಅದರಲ್ಲಿ ಪುರುಷ ಸದಸ್ಯರು ಅನೇಕರು ಹೆಂಡತಿ ಮಕ್ಕಳೊಂದಿಗೆ ಬಂದಿದ್ದು ಅವರಿಗೆಲ್ಲಾ ಮೈಸೂರಿನ ಲಲಿತ ಮಹಾಲ್‌ನಲ್ಲಿ ವಾಸ, ಸದಸ್ಯರಿಗೆ ಅವರ ಹೆಂಡತಿಯರಿಗೆ ತಲಾ ಒಂದೊಂದು ಕಾರು, ಅವರಿಗೆಲ್ಲಾ ಕಾಣಿಕೆಗಳು ಇತ್ಯಾದಿ. ಈ ಮಹಿಳಾ ಸಮಿತಿಯ ವೆಚ್ಚದ ಬಗ್ಗೆ ತಿಳಿದುಬಂದಿಲ್ಲ. ಸಂಸತ್ತಿನಲ್ಲಿ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರೇ ಹೆಚ್ಚಿನ ಲಾಭವನ್ನು ಪಡೆದುಕೊಳ್ಳುತ್ತಿರುವಾಗ, ಕಡಿಮೆ ಸಂಖ್ಯೆಯಲ್ಲಿ ಇರುವ ಮಹಿಳಾ ಸದಸ್ಯೆಯರಿಗಾಗಿ ವೆಚ್ಚವಾದರೂ ಕಿಂಚಿತ್ತಾದರೂ ಲಾಭವಿದ್ದೇ ಇದೆ. ಆದರೆ, ಅವರುಗಳು ಎಷ್ಟು ಜನ ತಮ್ಮ ಪತಿ-ಮಕ್ಕಳೊಂದಿಗೆ ಬಂದಿದ್ದರು ಎಂಬುದರ ಬಗ್ಗೆ ತಿಳಿಯದು !

ಮಹಿಳೆಯರ ಮಾನ್ಯತೆ

'ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸಸ್' (ಸಿ.ಬಿ.ಡಿ.ಟಿ) ರೂಪುಗೊಂಡು 36 ವರ್ಷಗಳೇ ಸಂದಿವೆ. ದೇಶದ ಆದಾಯ ತೆರಿಗೆ ಇಲಾಖೆಯ ಈ ಮೇರು ಮಂಡಳಿಯ ನೇತೃತ್ವದಲ್ಲಿ ಈವರಗೂ ಪುರುಷರೇ ನಿಭಾಯಿಸಿದ್ದರು. ಆದರೆ ಈಗ ಒಬ್ಬ ಮಹಿಳೆ ಆ ಸ್ಥಾನವನ್ನು ವಹಿಸಿಕೊಂಡಿದ್ದಾರೆ. ಅಂದರೆ ಮಾರ್ಚ್ ತಿಂಗಳಲ್ಲಿ ಸಿ.ವಿ.ಡಿ.ಟಿ.ಯ ಚೇರ್ ಪರ್ಸನ್ ಆಗಿ ನೇಮಕಗೊಂಡಿದ್ದಾರೆ. ಮೊದಲ ಬಾರಿಗೆ ಮಹಿಳೆಯೊಬ್ಬರು ಈ ಹುದ್ದೆಗೆ ಆಯ್ಕೆಯಾಗಿದ್ದಾರೆ.

ಈಚೆಗೆ ಖಾಸಗಿ ಕ್ಷೇತ್ರಗಳಲ್ಲಿ ಹಾಗೂ ಮಾಹಿತಿ ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಮಹಿಳೆಯರದೇ ಮೇಲುಗೈ ಎನ್ನುವುದು ಸಮಾಧಾನದ ಸಂಗತಿ. ಮಹಿಳೆಯರು ಪುರುಷರೇ ಪ್ರಾಬಲ್ಯವಿದ್ದ ಕ್ಷೇತ್ರಗಳ ಗಾಜಿನ ಛಾವಣಿಯನ್ನು ದೂರಕ್ಕೆ ಚಿಮ್ಮಿಸಿ ಎತ್ತರಕ್ಕೆ ಏರುತ್ತಿದ್ದಾರೆ. ಸೆಂಟರ್ ಫಾರ್ ಸಿಂಬಿಯಾಸಿಸ್ ಆಫ್ ಟೆಕ್ನಾಲಜಿ, ಎನ್ ವಿರೋನ್‌ಮೆಂಟ್ ಅಂಡ್ ಮ್ಯಾನೇಜ್‌ಮೆಂಟ್ ಬೆಂಗಳೂರಿನಲ್ಲಿರುವ ಒಂದು ಸಂಸ್ಥೆ. ಈ ಸಂಸ್ಥೆ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ಶೇ 34 ಸಂಸ್ಥೆಗಳ ಕೆಲವು ಕೆಲಸಗಳಿಗೆ ಪುರುಷರಿಗಿಂತ ಮಹಿಳೆಯರೂ ಹೆಚ್ಚು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದವು. ಪುರುಷರೇ ಅಭೇದ್ಯ ಕೋಟೆಗಳೆನಿಸಿದ್ದ ಕ್ಷೇತ್ರಗಳಲ್ಲೂ (ಕಮ್ಯಾಂಡೋಗಳು, ಪೈಲೆಟ್‌ಗಳು, ಸೇನೆಯಲ್ಲಿ) ಮಹಿಳೆಯರು ಕಾಲೂರಿ ತಮ್ಮ ಸಾಮರ್ಥ್ಯ ನಿರೂಪಿಸುತ್ತಿದ್ದಾರೆ. ಅಷ್ಟೇ ಅಲ್ಲ, ಈ ಕ್ಷೇತ್ರಗಳಲ್ಲಿ ಜವಾಬ್ದಾರಿಯುತ ಹುದ್ದೆಗಳನ್ನು ವಹಿಸಿ ಕೊಳ್ಳುತ್ತಿದ್ದಾರೆ. ಈಚೆಗೆ ಶ್ರೀಮತಿ ಬಂದೋಪಾಧ್ಯಾಯ ಏರ್‌ಕಮ್ಯಾಂಡರ್ ಆಗಿ ನೇಮಕ ಹೊಂದಿರುವುದನ್ನು ಇಲ್ಲಿ ಸ್ಮರಿಸಬಹುದು. ಹಾಗೆಯೇ ಫುಟ್‌ಬಾಲ್‌ನ ರಾಷ್ಟ್ರೀಯ ರೆಫರಿಯಾಗಿ ಕೇರಳದ ಬೆಂಟ್ಲಾ ಡಿಸೂಜ್ ಎಲ್ಲರನ್ನೂ ಆಶ್ಚರ್ಯಗೊಳಿಸಿದ್ದಾರೆ.

ಯುಟಿಐ ಇನ್‌ಟಿಟ್ಯೂಟ್ ಆಫ್ ಕ್ಯಾಪಿಟಲ್ ಮಾರ್ಕೆಟ್ಸ್‌ನ ಸಿ.ಇ.ಓ. ಆಗಿರುವ ಶ್ರೀ ಬಿ.ಡಿ.ವೋರೆಯವರ ಪ್ರಕಾರ ಮ್ಯಾನೇಜ್‌ಮೆಂಟ್ ಇನ್‌ಟಿಟ್ಯೂಟ್‌ಗಳಲ್ಲಿ ಇರುವ ಮಹಿಳಾ ಹಾಗೂ ಪುರುಷರ ಪ್ರಮಾಣ 40:60 ಬಹಳ ಶೀಘ್ರವೇ ಮಹಿಳೆಯರ ಪ್ರಮಾಣ ಪುರುಷರ ಪ್ರಮಾಣವನ್ನು ಮೀರುತ್ತದೆ. ಮಹಿಳೆಯರಲ್ಲಿ ನಿಷ್ಠೆ, ಬದ್ಧತೆಗಳು ಹೆಚ್ಚು :ಅವರಲ್ಲಿ ಸಂವಹನಾ ಚಾತುರ್ಯ ಹೆಚ್ಚು. ಆದರೆ ಸಂಸಾರದ ಜವಾಬ್ದಾರಿಗಳಿಂದಾಗಿ ಅನೇಕ ವೇಳೆ ಅವರನ್ನು ಹಿಡಿದಿಟ್ಟಂತಾಗುತ್ತದೆ. ವರ್ಗಾವಣೆಯ ಸಾಧ್ಯತೆಗಳಿದ್ದರೆ ಪ್ರಮೋಷನ್ ಬೇಡ ಎನ್ನುವ ಮಹಿಳೆಯರಿದ್ದಾರೆ. ಆದರೆ, ಕಾಲಕ್ರಮೇಣ ಈ ಪರಿಸ್ಥಿತಿ ಬದಲಾಗುತ್ತದೆ. ಮನೆಯ ಜವಾಬ್ದಾರಿಯನ್ನು ಪುರುಷರೂ ವಹಿಸಿಕೊಳ್ಳುತ್ತಾರೆ.

ಆಧಾರ.

ದುಡಿಯುವ ಮಹಿಳೆಯ ಸಂಗಾತಿ

ಭಾರತದ ಮಹಿಳಾ ಚಳುವಳಿಯಲ್ಲಿ ಸುಭದ್ರವಾದ ಸ್ಥಾನ ಗಿಟ್ಟಿಸಿಕೊಂಡಿರುವ ಮಹಿಳಾ ನಾಯಕಿ ವಿಮಲಾ ಇಂದು ಗತಿಸಿ ಈ ಜುಲೈ 24ಕ್ಕೆ ಒಂದು ವರ್ಷವಾಯಿತು. ಕಾಂ। ವಿಮಲಾ ಇಂದು ನಮ್ಮ ನಡುವೆ ಇರದಿದ್ದರೂ ಅವರು ನಡೆಸಿದ ಧೀರೋದಾತ್ತ ಹೋರಾಟ ಮತ್ತು ಆದರ್ಶಮಯ ಬದುಕು ಎಂದೆಂದಿಗೂ ಮಹಿಳಾ ಚಳುವಳಿಯಲ್ಲಿ ಭಾಗಿಯಾದವರಿಗೆ ದಾರಿದೀಪವಾಗಬಲ್ಲುದು. ಈ ಸಂದರ್ಭದಲ್ಲಿ ವಿಮಲಾ ರಣದೀವೆಯವರ ಬದುಕಿನ ಹಲವು ಸಂಗತಿಗಳನ್ನು ಮತ್ತೊಮ್ಮೆ ಮೆಲುಕು ಹಾಕುವುದು ನಮ್ಮ ಅರಿವಿನ ವಿಸ್ತರಣೆಗೆ ಒಂದು ಹೆಜ್ಜೆಯಾದೀತು.

ಮಹಾರಾಷ್ಟ್ರದ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ 1915ರ ಏಪ್ರಿಲ್ 10ರಂದು ಜನಿಸಿದ ವಿಮಲಾ ತಮ್ಮ ಜೀವನದ ದಾರಿಯನ್ನು ಅತಿ ಚಿಕ್ಕ ವಯಸ್ಸಿನಲ್ಲೇ ಗುರುತಿಸಿಕೊಂಡವರು. 12-13 ಚಿಕ್ಕ ವಯಸ್ಸಿನ ಬಾಲಕಿ ಅಂದಿನ ರಾಷ್ಟ್ರೀಯತಾವಾದಿ ಚಳುವಳಿಯ ಅಬ್ಬರಕ್ಕೆ ಆಕರ್ಷಿತರಾಗಿ ಸೇವಾದಳ ಕಾರ್ಯಕರ್ತೆಯಾಗಿ ಕಾಂಗ್ರೆಸ್ ಸೇರಿದರು. 1930ರಲ್ಲಿ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿ ವಿದೇಶೀ ಬಟ್ಟೆಗಳ ಮರಾಟದ ಅಂಗಡಿಯೆದರು ಪಿಕೆಟಿಂಗ್ ನಡಿಸಿದ್ದಕ್ಕಾಗಿ ಸೆರೆಮನೆ ಸೇರಿದರು. 15 ವರ್ಷದ ಹುಡುಗಿಗೆ ಆರು ತಿಂಗಳ ಸೆರೆಮನೆ ವಾಸ. ಅಲ್ಲಿಂದ ಮುಂದೆ ಅವರು ಬದುಕಿನಲ್ಲಿ ಹಿಂದೆ ನೋಡದೆ ಅಚಲವಾದ ಶ್ರದ್ಧೆಯಿಂದ ಮುನ್ನಡೆದರು.

ಅವರ ಸಂಬಂಧಿಯಾದ ಕಾಂಮ್ರೇಡ್ ಎಸ್.ಜಿ.ಸರ್ದೇಸಾಯಿಯಂತಹ ನಿಷ್ಠಾವಂತ ಕಮ್ಯೂನಿಸ್ಟರ ಪ್ರಭಾವ ಮತ್ತು ಮಾರ್ಗದರ್ಶನ ವಿಮಲಾರವರ ಬದುಕಿಗೆ ಹೊಸ ದಿಕ್ಕನ್ನು ತೋರಿಸಿತು. ಜೊತೆಗೆ ಹುರುಪನ್ನು ನೀಡಿತು. ಚಿಕ್ಕಂದಿನಲ್ಲೇ ತಂಗಿ, ತಮ್ಮಂದಿರನ್ನು ನೋಡಿಕೊಳ್ಳಬೇಕಾದ ಜವಾಬ್ದಾರಿಯೂ ಹೆಗಲಿಗೆ ಬಿದ್ದ ಕಾರಣ ಉದ್ಯೋಗ ಅರಸಿ ಹೊರಟರು. ಶಾಲಾ ಶಿಕ್ಷಕಿಯಾಗಿ ಕೆಲಸ ಮಾಡಿದರು. ನಂತರ ರಂಗ ನಟಿಯಾಗಿ ಮತ್ತು ಚಿತ್ರನಟಿಯಾಗಿಯೂ ಕೆಲಸ ಮಾಡಿದರು. ಇವೆಲ್ಲದರ ನಡುವೆ ಕಮ್ಯೂನಿಸಂನ ಸೆಳೆತ ಅವರನ್ನು ಚಳುವಳಿಯತ್ತ ಎಳೆಯುತ್ತಿತ್ತು. ಸ್ಪೇನ್ ಕಮ್ಯೂನಿಸ್ಟ್ ಪಕ್ಷದ ನಾಯಕಿ ಲಾ ಪ್ಯಾಷನರ್ ಅವರ ಜೀವನದ ಸ್ಫೂರ್ತಿಯ ಸೆಲೆಯಾಗಿತ್ತು. 1936-37ರಿಂದ ರಾಜಕೀಯ ಕ್ಷೇತ್ರಕ್ಕೆ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡ ವಿಮಲಾ ಅಲ್ಲಿಂದ ತಮ್ಮ ಜೀವಿತದ ಕೊನೆಯವರೆಗೂ ಸಕ್ರಿಯವಾಗಿ ಬದುಕಿದರು; ಹೋರಾಡಿದರು ಮತ್ತು ಶ್ರೇಷ್ಠ ಮಾದರಿಯಾಗಿ ನಮ್ಮ ನಡುವೆ ನೆನಪು ನಿಲ್ಲಿಸಿದ್ದಾರೆ.

1939ರಲ್ಲಿ ಕಮ್ಯೂನಿಸ್ಟ್ ನಾಯಕ ಕಾಂ। ಬಿ.ಟಿ. ರಣದೀವೆಯವರನ್ನು ಮದುವೆಯಾದ ಮೇಲೆ ಹೋರಾಟದ ಬದುಕಿಗೊಂದು ಹೊಸ ಸ್ವರೂಪ ಬಂದಿತು. ದುಡಿಯುವ ಮಹಿಳೆಯರನ್ನು ಸಂಘಟಿಸುವತ್ತ ಮತ್ತು ಅವರ ಸಮಸ್ಯೆಗಳನ್ನು ಪರಿಹರಿಸುವತ್ತ ವಿಮಲಾ ತಮ್ಮ ಇಡೀ ಜೀವಮಾನ ಸವೆಸಿದರು. ಗಿರಣಿ ಕಾಮಗಾರಿ ಸಂಘದಲ್ಲಿ ವಿಮಲಾ ಹೆಚ್ಚು ಕಾಲ ದುಡಿದರು. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ದುಡಿಯುವ ವರ್ಗ ತನ್ನ ಬಲವಾದ ಹೋರಾಟ ನಡೆಸಿದ್ದ ಸಂದರ್ಭದಲ್ಲಿ ವಿಮಲಾರವರು ಹೋರಾಟದ ಮುಂಚೂಣಿಯಲ್ಲಿದ್ದರು. ಮುಂಬೈಯ ಕಾರ್ಮಿಕ ಚಳಿವಳಿಯಲ್ಲೇ ಮರೆಯಲಾಗದ್ದು. ಆಗ ಸೆರೆಮನೆಯಲ್ಲಿ 17ದಿನಗಳು ಉಪವಾಸ ಮುಷ್ಕರದಲ್ಲಿ ಪಾಲ್ಗೊಂಡಿದ್ದರು, ಮತ್ತು ಸುಮಾರು ಎರಡು ವರ್ಷಗಳ ಸೆರೆಮನೆ ವಾಸ ಅವರದಾಗಿತ್ತು.

1979ರಲ್ಲಿ ಮದ್ರಾಸಿನಲ್ಲಿ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಮೊದಲ ಸಮ್ಮೇಳನದಲ್ಲಿ ವಿಮಲಾ ರಣದೀವೆ ಈ ಸಂಘಟನೆಯ ಸಂಚಾಲಕಿಯಾಗಿ ಆಯ್ಕೆಯಾದರು. ಈ ಸಂಘಟನೆಯಡಿಯಲ್ಲಿ ಅಂಗನವಾಡಿ ಮಹಿಳೆಯರನ್ನು ಸಂಘಟಿಸಿದರು. ಕಾಂ। ವಿಮಲಾ ರಣದೀವೆ ಉತ್ತಮ ಸಂಘಟಕಿ ಮಾತ್ರವಲ್ಲ, ಒಳ್ಳೆಯ ಬರಹಗಾರ್ತಿಯೂ ಎಂಬುದನ್ನು ಅವರು ರಚಿಸಿರುವ ಹಲವಾರು ಲೇಖನಗಳು ಸಾಬೀತು ಪಡಿಸಿವೆ. Voice of the working women ಸಂಪಾದಕಿಯಾಗಿ ಮತ್ತು ಕಾಮ್‌ಕ್ಯಾಜಿ ಮಹಿಳಾ ಎಂಬ ಹಿಂದಿ ಪತ್ರಿಕೆಯ ಸಂಪಾದಕಿಯಾಗಿ ವಿಮಲಾ ಕಾರ್ಯನಿರ್ವಹಿಸಿದ್ದಾರೆ.

ಕಮ್ಯೂನಿಸ್ಟ್ ಪಕ್ಷದ ಅತ್ಯುನ್ನತ ಸ್ಥಾನಗಳಲ್ಲಿ ವಿಮಲಾ ಕೆಲಸ ಮಾಡಿದ್ದಾರೆ. 1987 CITUನ ಕಾರ್ಯದರ್ಶಿಯಾಗಿ ಮತ್ತು 1988ರಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯೆಯರಾಗಿ ತಮ್ಮ ಸಾಮರ್ಥ್ಯ ತೋರಿಸಿದ್ದಾರೆ. ಕೇವಲ ಮಹಿಳೆಯರ ನಾಯಕಿಯಾಗಿ ಮಾತ್ರವಲ್ಲ ದುಡಿಯುವ ಜನತೆಯ ನೇತಾರಳಾಗಿ ಬದುಕಿನುದ್ದಕ್ಕೂ ಹೋರಾಟ ನಡೆಸಿದ ಕಾಂ। ವಿಮಲಾ ರಣದೀವೆ ಕಳೆದ ಜುಲೈ 24ರಂದು ತಮ್ಮ ಕೊನೆಯುಸಿರೆಳೆದರು. ಆ ಮಹಾನ್ ಚೇತನದ ಸ್ಮರಣೆಗಾಗಿ ಈ ಲೇಖನ.

ಪ್ರೀತಿಯ ಅಚಲ,

ಇತ್ತೀಚೆಗೆ ಅನಿರೀಕ್ಷಿತವಾಗಿ ಒಂದು ಕುಟುಂಬಕ್ಕೆ ಭೇಟಿ ಕೊಟ್ಟೆ. ಆ ಮನೆಯಲ್ಲಿ ಕಳೆದ ಒಂದು ರಾತ್ರಿ ನನ್ನಲ್ಲಿ ಒಂದು ಪ್ರಶ್ನೆ ಹುಟ್ಟಿ ಚಿಂತನೆಗೆ ಹಚ್ಚಿತು. ತಾಯಿ ತನ್ನ ತಾಯ್ತನವನ್ನು ಎಲ್ಲಿಯವರೆಗೆ ನಿಭಾಯಿಸಬೇಕು? ಎನ್ನುವುದೇ ಆ ಪ್ರಶ್ನೆ. ಇದಕ್ಕೆ ಸಂಪ್ರದಾಯವಾದಿಗಳು 'ಸಾಯುವವರೆಗೆ' ಎಂದುತ್ತರಿಸಿಯಾರು. ಆದರೆ ಇದು ಎಷ್ಟು ಅವೈಜ್ಞಾನಿಕ ಎನ್ನುವುದಕ್ಕೆ ನಾನು ಉದಾಹರಣೆಯೊಂದನ್ನು ಕೊಡುತ್ತೇನೆ. ಮೇಲೆ ಹೇಳಿದ ಈ ಕುಟುಂಬದಲ್ಲಿ 86 ವರ್ಷದ ಯಜಮಾನ, 80 ವರ್ಷದ ಆತನ ಮಡದಿ, ಮತ್ತು ಅವರ ಕೊನೆಯ ಮಗ ಇದ್ದಾರೆ. ಈ ಮಗ ಸರ್ಕಾರದ ಬಹಳ ದೊಡ್ಡ ಅಧಿಕಾರಿಯಾಗಿರುವಾತ. ಆತನ ಹೆಂಡತಿ ಮಕ್ಕಳು ಬೆಂಗಳೂರಿನ ಐಷಾರಾಮ ಜೀವನಕ್ಕೆ ಒಗ್ಗಿಹೋಗಿರುವ ಕಾರಣ ಈ ಸಣ್ಣ ಊರಿಗೆ ಬಂದು ಈ ವೃದ್ಧರ ಜೊತೆ ಇರಲಾರರು. ಮಗನಿಗೆ ಇತ್ತೀಚೆಗೆ ತನ್ನ ತಂದೆತಾಯಿ ಇರುವ ಊರಿಗೆ ವರ್ಗವಾಗಿದೆ. ತನ್ನ ಕುಟುಂಬವನ್ನು ಬೆಂಗಳೂರಿನಲ್ಲಿ ಸುಖವಾಗಿರಲು ಬಿಟ್ಟು ತಾನು ಮಾತ್ರ ತಂದೆತಾಯಿಯ ಜೊತೆ ಇದ್ದಾನೆ. ತಾಯಿಗೆ ಇತ್ತೀಚೆಗೆ ವಿಪರೀತ ಖಾಯಿಲೆಯಾಗಿ ಹಾಸಿಗೆ ಹಿಡಿದಿದ್ದರು ಆಕೆಯ ಪಕ್ಕೆ ಎಲುಬುಗಳೆಲ್ಲಾ ಸವೆದು ಹೋಗಿ ಒಳ್ಳೆ ಮೂಳೆಗಳ ಹಂದರಂತಿದ್ದಾರೆ. ಈ ಸಾಹೇಬ ಮಗ ಮಾಡಿರುವ ಉಪಕಾರವೆಂದರೆ ಒಬ್ಬ ಅಡಿಗೆಯವರನ್ನು ಗೊತ್ತುಮಾಡಿರುವುದು. ಈ ಗಂಡಸರಿಗೆ ಮನೆ ಎಂದರೆ, ಹೆಂಗಸರ ಕೆಲಸವೆಂದರೆ, ಬರೀ ಅಡಿಗೆ ಕೆಲಸ ಅಷ್ಟೇ ಎಂದು ಯಾಕೆ ಅನ್ನಿಸಿ ಬಿಡುತ್ತದೋ ಗೊತ್ತಿಲ್ಲ. ಈ ತಾಯಿ ಬೆಳಿಗ್ಗೆ ಬೇಗ ಏಳುತ್ತಾರೆ. ಬೀದಿ ಬಾಗಿಲು ಸಾರಿಸುತ್ತಾರೆ. ರಂಗವಲ್ಲಿ ಹಾಕುತ್ತಾರೆ. ಗಂಡನಿಗೆ ಕಾಫಿ ಮಾಡಿಕೊಡುತ್ತಾರೆ. ಆಫಿಸರ್ ಮಗ ಎದ್ದದ್ದು ಗಮನಿಸಿ ಆತನ ಕೋಣೆಗೇ ಹೋಗಿ 'ಕಾಫಿ ಮಾಡಿಕೊಡಲೇ ಮಗು' ಎಂದು ಪರಿಚರಿಸುತ್ತಾರೆ. ಮಗ 'ಕೊಡು' ಎಂದರೆ, ಆತನ ಕೋಣೆಗೇ ಕಾಫಿ ಸರಬರಾಜು ಮಾಡುತ್ತಾರೆ. ಅಡಿಗೆಯವ ಒಂಭತ್ತು ಗಂಟೆಗೆ ಬರುವವರೆಗೆ ಆಕೆ ಮನೆಯ ಸಮಸ್ತವನ್ನೂ ನಿಭಾಯಿಸುತ್ತಾರೆ. ಹಳೆಯ ಕಾಲದ ಆ ಮನೆಯೋ ವಿಶಾಲವಾಗಿ ಒಳ್ಳೆ ದೇಗುಲದಂತಿದೆ. ಆಕೆ ಒಂದು ಕೆಲಸ ಮಾಡುತ್ತಾರೆ. ಹತ್ತು ನಿಮಿಷ ಮಲಗುತ್ತಾರೆ. ಹತ್ತು ಹೆಜ್ಜೆಯಿಡುವಷ್ಟರಲ್ಲಿ ಆಕೆಗೆ ಏದುಸಿರು ಬರುತ್ತದೆ. ವಯಸ್ಸಾದರೂ ಆರೋಗ್ಯವಾಗಿರುವ ಗಂಡನಾಗಲೀ ದಷ್ಟಪುಷ್ಟ ಮಗನಾಗಲೀ ಆಕೆಯ ಯಾವ ಕೆಲಸವನ್ನೂ ತಾವು ಮಾಡುವುದಿಲ್ಲ. ಏಕೆಂದರೆ ಅವರೆಲ್ಲ ಪುರುಷ ಶ್ರೇಷ್ಠರು. ಈಕೆ ತನ್ನ ದೇಹದಲ್ಲಿ ಕೊನೆಯ ಉಸಿರಿರುವವರೆಗೂ ಮನೆಗಾಗಿ ದುಡಿಯುವುದು ತನ್ನ ಕರ್ತವ್ಯವೆಂದುಕೊಂಡಿದ್ದಾರೆ. ಈಕೆಯ ಮೊದಲ ಮಗ ನಗರದಲ್ಲಿ ವಾಸಿಸುವವ, ತಾಯಿ ತಂದೆಯರನ್ನು ತನ್ನ ಮನೆಗೆ ಕರೆಯುತ್ತಾರೆ. ಆದರೆ ಇವರು ಹೋಗುವುದಿಲ್ಲ. ಏಕೆಮದರೆ ಬಹಳ ವರ್ಷಗಳ ನಂತರ ಈ ಸಾಹೇಬ ಮಗ ತಮ್ಮೂರಿಗೆ ವರ್ಗಮಾಡಿಸಿಕೊಂಡು ಬಂದಿದ್ದಾನೆ. ಅವನಿಗೆ ತೊಂದರೆಯಾಗಬಾರದಲ್ಲ ಎನ್ನುವ ಕಾಳಜಿ ಎನ್ನುವ ಕಕ್ಕುಲತೆ.

ಎಷ್ಟೋ ಮಹಿಳೆಯರು ಹೀಗೆ ತಮ್ಮ ವೃದ್ಧಾಪ್ಯದಲ್ಲೂ ತಮ್ಮ ಅನಾರೋಗ್ಯದಲ್ಲೂ ಮನೆಗಾಗಿ, ಗಂಡ ಮಕ್ಕಳಿಗಾಗಿ ದುಡಿಯುವುದೇ ತಮ್ಮ ಕರ್ತವ್ಯವೆಂದುಕೊಳ್ಳುತ್ತಾರೆ. ಕುಟುಂಬದ ಉಳಿದ ಸದಸ್ಯರೂ ಮಹಿಳೆಯನ್ನು ಹೀಗೆ ದುಡಿಸಿಕೊಳ್ಳುವುದಕ್ಕೆ ಏನೂ ನಾಚಿಕೆ ಪಡುವುದಿಲ್ಲ. ಏಕೆಂದರೆ 'ಹೆಣ್ಣು ಇರುವುದೇ ಮನೆಯಲ್ಲಿ ದುಡಿಯಲು' ಎನ್ನುವ ಮನೋಭಾವ. ಮಹಿಳೆಗೆ ಇದರಿಂದ ಮುಕ್ತಿ ಎಂದು ಸಿಗುತ್ತದೋ ಗೊತ್ತಿಲ್ಲ.

-ಶತಭಿಷಾ

ಮಹಿಳೆಯರಿಗೆ ಕೃಷಿ ಪ್ರಶಸ್ತಿ

ಜುಲೈ ತಿಂಗಳ ಆರಂಭದಲ್ಲಿ ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಿತು. ಹೆಣ್ಣಿನಿಂದಲೇ ಆವಿಷ್ಕಾರವಾದ ಕೃಷಿಯಲ್ಲಿ ಹೆಣ್ಣಿನ ಪಾತ್ರವನ್ನು ಒತ್ತಿಹೇಳಬೇಕಿಲ್ಲ. ಈ ಬಾರಿಯ ಕೃಷಿ ಪ್ರಶಸ್ತಿಯ ಪಟ್ಟಿಯಲ್ಲಿ ಕೆಲವು ಮಹಿಳೆಯರ ಹೆಸರೂ ಇದ್ದವು. ಮಗುವನ್ನು ಎತ್ತಿಕೊಂಡು ವೇದಿಕೆಗೆ ಬಂದು ಪ್ರಶಸ್ತಿ ಸ್ವೀಕರಿಸಿದ ದಾಕ್ಷಾಯಿಣಿ ಅಂತಹ ಒಬ್ಬ ಮಹಿಳೆ. ಕೊಪ್ಪಳ ತಾಲೂಕು ಗೊಂಡಬಾಳದ ದಾಕ್ಷಾಯಣಿಗೆ ಗಂಡ ತೀರಿಕೊಂಡು ವರ್ಷ ಕಳೆದಿದೆ. 30 ಎಕರೆ ಜಮೀನಿನಲ್ಲಿ ದುಡಿಯಲು ಯಾರೂ ಇಲ್ಲದಾಗ, ಪತಿ ಬಿಟ್ಟು ಹೋದ ಜಮೀನಿನಲ್ಲಿ ಈ ವರ್ಷ ದಾಕ್ಷಾಯಣಿ 138.525 ಕ್ವಿಂಟಾಲ್ ಮುಸುಕಿನ ಜೋಳ ಬೆಳೆದು ಮೊದಲ ಬಹುಮಾನ ಪಡೆದಿದ್ದಾರೆ. ದಾಕ್ಷಾಯಣಿಯಂತಹ ಮಹಿಳೆಯರು ನಮ್ಮ ಹಳ್ಳಿ ಹಳ್ಳಿಗಳಲ್ಲಿ ಸಾವಿರ ಸಂಖ್ಯೆಯಲ್ಲಿ ದೊರೆಯುತ್ತಾರೆ. ಹೆಣ್ಣಿನ ದುಡಿಮೆ, ಶ್ರಮ ಸಾರ್ವಜನಿಕವಾಗಿ ಗುರುತಿಸಲ್ಪಟ್ಟು, ಪುರಸ್ಕೃತವಾಗುತ್ತಿರುವುದು ನಿಜಕ್ಕೂ ಸಂತೋಷದ ವಿಷಯ.

CPMG/KA/BG-8/99

ವಿಜ್ಞಾನವನ್ನು ಜನಪ್ರಿಯಗೊಳಿಸುತ್ತಿರುವ ಮಹಿಳೆ - ಪ್ರೊ. ಮರಿಯಮ್

ವಿಜ್ಞಾನವನ್ನು ಜನಪ್ರಿಯಗೊಳಿಸಿದ ಕೆಲಸಕ್ಕೆ 1999ರ ಕಳಿಂಗ ಪ್ರಶಸ್ತಿ ಪಡೆದ, ಘಾನಾದ ಪ್ರೊ.ಮರಿಯಮ್ ಎಂಬುವವರು ಇತ್ತೀಚೆಗೆ ಭಾರತಕ್ಕೆ ಭೇಟಿ ಕೊಟ್ಟರು. ಹೆಣ್ಣು ಮಕ್ಕಳನ್ನು ವಿಜ್ಞಾನ ರಂಗಕ್ಕೆ ಆಕರ್ಷಿಸುವ ಬಹು ಮುಖ್ಯದಲ್ಲಿ ಕೆಲಸ ತೊಡಗಿರುವ ವಿಜ್ಞಾನಿ ಈಕೆ.

ಬಾಲ್ಯದಲ್ಲಿ ಮರಿಯಮ್ ಸದಾ ಕುತೂಹಲದ ಹುಡುಗಿ. ಶಾಲೆಯಲ್ಲಿ ಕಲಾ ವಿಷಯಗಳತ್ತ ಅವರ ಆಸಕ್ತಿ ಹೆಚ್ಚಿರಲಿಲ್ಲ. ಕೈಯಿಂದ ಪ್ರಯೋಗ ಮಾಡುವುದು ಭಾರೀ ಖುಷಿ ಕೊಡುತ್ತಿತ್ತು. ಆಕೆ ಸದಾ ವಿಜ್ಞಾನಿಯಾಗಲು ಬಯಸಿದ್ದರು. ಘಾನಾ ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರದಲ್ಲಿ ಪದವಿ ಪಡೆದರು. ನಂತರ ಅಮೇರಿಕದಲ್ಲಿ ಜೀವರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯಕ್ಕಿಳಿದರು. ವಿವರಿಸಿ ಹೇಳುವುದು ಮರಿಯಮ್ ಅವರ ಸಹಜ ಪ್ರವೃತ್ತಿಯಾಗಿತ್ತು, ಅತಿ ಪ್ರಿಯ ಹವ್ಯಾಸವಾಗಿತ್ತು. ತಮ್ಮ ವಿಜ್ಞಾನೇತರ ಸ್ನೇಹಿತರಿಗೆ ವಿಜ್ಞಾನವನ್ನು ವಿವರಿಸುತ್ತಿದ್ದರು. ವೇದಿಕೆಗಳ ಮೇಲೆ ವಿಜ್ಞಾನವನ್ನು ಕುರಿತು ಮಾತನಾಡುತ್ತಿದ್ದರು. ಎಲ್ಲರಿಗೂ ಅರ್ಥವಾಗುವ ಭಾಷೆಯನ್ನು ಬಳಸುವುದು, ತಮ್ಮ ಸಂಶೋಧನೆ, ಉಪನ್ಯಾಸಗಳೊಡನೆ, ಜನಸಾಮಾನ್ಯರೊಡನೆ ವಿಜ್ಞಾನದ ವಿಷಯಗಳನ್ನು ಹಂಚಿಕೊಳ್ಳುವುದು, ಹೆಚ್ಚುಹೆಚ್ಚು ಹೆಣ್ಣು ಮಕ್ಕಳನ್ನು ವಿಜ್ಞಾನದತ್ತ ಸೆಳೆಯುವುದು ಅವರ ಮುಖ್ಯ ಕೆಲಸವಾಗಿತ್ತು. ಶಿಕ್ಷಣ ಮಂತ್ರಾಲಯ ಹೆಣ್ಣು ಮಕ್ಕಳಿಗಾಗಿ 'ಸಯನ್ಸ್, ಟೆಕ್ನಾಲಜಿ, ಮ್ಯಾತಮಾಟಿಕ್ಸ್ ಎಜುಕೇಶನ್ ಕ್ಲಿನಿಕ್' ಆರಂಭಿಸಿದಾಗ ಈಕೆ ಅಲ್ಲಿ ನೀಡುವ ಯೋಜನೆ ಇವರದಾಗಿತ್ತು. 'ಜನಸಾಮಾನ್ಯರಿಗೆ ವಿಜ್ಞಾನ ಅರ್ಥವಾಗುವುದು, ಮೂಢನಂಬಿಕೆಗಳ ವಿರುದ್ಧ ಹೋರಾಡಲು ಅಗತ್ಯ' ಎನ್ನುವ ಮರಿಯಮ್, ಜನಸಾಮಾನ್ಯರಿಗೆ ವಿಜ್ಞಾನವನ್ನು ತಲುಪಿಸುವ ಕೆಲಸದಲ್ಲಿ ತೊಡಗಿದವರು. 'ಘಾನಾದಲ್ಲಿ ಒಂದೇ ಒಂದು ಕೂಡಾ ಜನಪ್ರಿಯ ವಿಜ್ಞಾನ ಪತ್ರಿಕೆ ಇಲ್ಲ. ದಿನಪತ್ರಿಕೆಗಳಲ್ಲಿ ವಿಜ್ಞಾನದ ನಿಯಮಿತ ಅಂಕಣಗಳಿಲ್ಲ' ಎಂದು ವ್ಯಥೆ ವ್ಯಕ್ತಪಡಿಸುವ ಮರಿಯಮ್ ಇಂತಹ ಕೊರತೆಗಳನ್ನು ತುಂಬಲು ತಮ್ಮದೇ ರೀತಿಯಲ್ಲಿ ಯತ್ನಿಸಿರುವ ಮಹಿಳೆ.

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560085

To:

Smt/Sri

Book-Post/News Letter